# ಜ್ಞಾನಶಕ್ತಿ

ಮಾಸ ಪತ್ರಿಕೆ

JNANASHAKTHI

ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 10 Reg. No. : KARBIL / 2005 / 16123 ನವಂಬರ್ - 2021 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ 11 ಪ್ರಕಟಣೆ : 9-11-2021




## ಶ್ರೀ ಸುಬ್ರಮ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ನೂತನ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



ಸುಬ್ರಹ್ಮಣ್ಯ ಸಭಾ ಮಂಗಳೂರು ಇದರ ನಿರ್ದೇಶಕರಾದ ಶ್ರೀಯುತ ಸಂತೋಷ್ ಕುಮಾರ್ ಹಾಗೂ ಶ್ರೀಮತಿ ರಜನಿ ಸಂತೋಷ್ ಇವರು ವಾರ್ಷಿಕ ಪೂಜಾ ಪ್ರಯುಕ್ತ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ ಹಿರಿಯ ನಾಗರಿಕರ ವಸತಿ ನಿಲಯ'ಕ್ಕೆ ರೂಪ್ಯಾ 1,00,000/- ದೇಣಿಗೆ ನೀಡಿರುತ್ತಾರೆ. ಈ ಸಂದರ್ಭದಲ್ಲಿ ಸಭಾದ ಕಾರ್ಯದರ್ಶಿ ಶ್ರೀ ಕರುಣಾಕರ ರಾವ್ ಬೆಳ್ಳೆ, ಯುವ ವೇದಿಕೆಯ ಅಧ್ಯಕ್ಷ ಶ್ರೀ ಮನೀಶ ರಾವ್, ಇನ್ನೋರ್ವ ನಿರ್ದೇಶಕ ರಘುವೀರ್ ರಾವ್, ಸಭಾದ ಮಹಿಳಾ ವಿಭಾಗದ ಉಪಾಧ್ಯಕ್ಷೆ ಶ್ರೀಮತಿ ಸೋನಾ ದಿವಾಕರ್ ಮತ್ತು ಶ್ರೀ ದಿವಾಕರ್ ರಾವ್, ಸಭಾ ನಿರ್ದೇಶಕರಾದ ಶ್ರೀ ವಿಜಯ ಕುಮಾರ್, ಶ್ರೀ ಭುಜಂಗ ರಾವ್ ಇವರು ಉಪಸ್ಥಿತರಿದ್ದರು. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ.

**ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.**



ಶ್ರೀಮತಿ ಸ್ನೇಹಲತಾ ಮತ್ತು ಡಾ. ದಿವಾಕರ ರಾವ್ ತಮ್ಮ ಹೆತ್ತವರಾದ ಸಾಂತೂರ್ ಜನಾರ್ದನಯ್ಯ ಮತ್ತು ಶ್ರೀಮತಿ ಜಲಜರವರ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂಪ್ಯಾ 50,000/- ದೇಣಿಗೆ ನೀಡಿರುತ್ತಾರೆ. ಈ ಸಂದರ್ಭದಲ್ಲಿ ಅವರ ಮೊಮ್ಮಗ ಶ್ರೀ ಅರ್ಪಿತ ಶರ್ಮ, ಶ್ರೀಮತಿ ಸ್ನೇಹಾ ಶರ್ಮ, ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣಾಕರ ರಾವ್ ಬೆಳ್ಳೆ, ನಿರ್ದೇಶಕರಾದ ಶ್ರೀ ಸಂತೋಷ್ ರಾವ್ ಯು. ಉಪಸ್ಥಿತರಿದ್ದರು. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ.

**ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.**

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವಿದ್ಯಾನಿಧಿಗೆ ದೇಣಿಗೆ



ಶ್ರೀ ಸುಬ್ರಹ್ಮಣ್ಯ ಸಭಾದ ನಿರ್ದೇಶಕರಾದ ಮಂಗಳೂರು ನಿವಾಸಿ ಶ್ರೀ ಪಿ. ಮುರಳೀಧರ ರಾವ್ ಮತ್ತು ಅವರ ಸಹೋದರ ಶ್ರೀ ಪಿ. ನಟರಾಜ್ ರಾವ್‌ರವರು ತಮ್ಮ ಹೆತ್ತವರ ಸವಿನೆನಪಿಗಾಗಿ ಸ್ಥಾಪಿಸಿದ ಟ್ರಸ್ಟ್‌ನ್ನು ಶ್ರೀ ಸುಬ್ರಹ್ಮಣ್ಯ ಸಭಾದ ಟ್ರಸ್ಟ್‌ನೊಂದಿಗೆ ವಿಲೀನ ಗೊಳಿಸಿದ್ದು ರೂ. 5,30,000/- ಶ್ರೀ ಸಭಾಕ್ಕೆ ನೀಡಿದ್ದಾರೆ. ರೂ. 3,30,000/-ಗಳ ನಿಧಿಯ ಬಡ್ಡಿಯನ್ನು ಪಾವಂಜೆಯಲ್ಲಿ ನಡೆಯುವ ವೈದಿಕ ಶಿಬಿರಕ್ಕೆ ಹಾಗೂ ನಿತ್ಯ ಅನ್ನದಾನಕ್ಕೆ ನೀಡಲು ಸೂಚಿಸಿದ್ದು ರೂ. 2,00,000/-ಗಳ ವಿದ್ಯಾನಿಧಿಯನ್ನು ಸಭಾದಲ್ಲಿ ಆರಂಭಿಸಿದ್ದಾರೆ. ಶ್ರೀ ಸುಬ್ರಹ್ಮಣ್ಯ ಸಭಾದ 'ನಾಡಹಬ್ಬ' ಕಾರ್ಯಕ್ರಮದಲ್ಲಿ ಅವರನ್ನು ಅಭಿನಂದಿಸಲಾಯಿತು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಕಾರ್ಯದರ್ಶಿ ಶ್ರೀ ಕರುಣಾಕರ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಶ್ರೀಮತಿ ಮಂಜುಳಾ ಮುರಳೀಧರ್, ಶ್ರೀಮತಿ ಉಷಾ ನಟರಾಜ್ ಉಪಸ್ಥಿತರಿದ್ದರು. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ.

*ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.*

## ಶ್ರೀ ರಘುವೀರ್ ಪೆರ್ಡೂರು ಇವರಿಗೆ ಸನ್ಮಾನ



ದಿ. ದಾಮೋದರ ಭಾಗೀರಥಿ ಶಾಸ್ತ್ರಿ ಪ್ರತಿಷ್ಠಾನ ವತಿಯಿಂದ ಶ್ರೀ ಸುಬ್ರಹ್ಮಣ್ಯ ಸಭಾದ 'ನಾಡಹಬ್ಬ' ಕಾರ್ಯಕ್ರಮದಲ್ಲಿ ಶ್ರೀ ಸಭಾದ ನಿರ್ದೇಶಕರೂ, ಹವ್ಯಾಸಿ ಛಾಯಾಗ್ರಾಹಕರೂ, ರೇಖಾಚಿತ್ರ ಪರಿಣಿತರೂ, ಸಮಾಜಸೇವೆಯಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡವರೂ ಆದ ಶ್ರೀ ರಘುವೀರ್ ಪೆರ್ಡೂರು ಮತ್ತು ಶ್ರೀಮತಿ ಲತಾ ದಂಪತಿಗಳನ್ನು ವಿಶೇಷ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಪ್ರತಿಷ್ಠಾನದ ಶ್ರೀ ಸದಾಶಿವ ಶಾಸ್ತ್ರಿ ಮತ್ತು ಶ್ರೀಮತಿ ಸೌಭದ್ರಾ ಶಾಸ್ತ್ರಿ ಕಾರ್ಯಕ್ರಮ ನಡೆಸಿಕೊಟ್ಟರು.

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನಾಡಹಬ್ಬ




ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ. 17-10-2021ನೇ ರವಿವಾರ ದಸರಾ "ನಾಡಹಬ್ಬ" ಕಾರ್ಯಕ್ರಮವನ್ನು ವಿವಿಧ ಕಾರ್ಯಕ್ರಮಗಳೊಂದಿಗೆ ಭಕ್ತಿಪೂರ್ವಕದಿಂದ ಆಚರಿಸಲಾಯಿತು. ಬೆಳಗ್ಗೆ ವಿವಿಧ ಪಾರಾಯಣಗಳನ್ನು ಶಂಕರತತ್ವ ಅಭಿಯಾನ ಸದಸ್ಯರೂ, ಭಜನಾ ಕಾರ್ಯಕ್ರಮವನ್ನು ಶಾರದಾಂಬಾ ಭಜನಾ ಮಂಡಳಿಯವರು ನಡೆಸಿದರು. ಬಳಿಕ ಸುಗಮ ಸಂಗೀತ, ಹುಲಿವೇಷ ಕುಣಿತ ಸ್ಪರ್ಧೆಗಳು ನಡೆದವು. ತೀರ್ಪುಗಾರರಾಗಿ ಶ್ರೀ ನಾಗರಾಜ ಶರ್ಮ, ಶ್ರೀಮತಿ ಸ್ನೇಹಲತಾ ದಿವಾಕರ್, ಶ್ರೀ ಸಿ. ರಾಘವೇಂದ್ರ ರಾವ್ ಸಹಕರಿಸಿದರು. ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಶ್ರೀ ಸದಾಶಿವ ಶಾಸ್ತ್ರಿ ಮತ್ತು ಶ್ರೀಮತಿ ಸೌಭದ್ರಾ ಶಾಸ್ತ್ರಿ ನಡೆಸಿದರು. ಭೋಜನದ ಬಳಿಕ ಶ್ರೀ ಸಂಜಯ್ ಕುಮಾರ್ ಪಲಿಮಾರ್ ನಿರ್ದೇಶನದಲ್ಲಿ ಯಕ್ಷಗಾನ 'ಮನ್ಮಥ ಕಲ್ಯಾಣ' ನಡೆಯಿತು. ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿ, ಶ್ರೀ ಸುರೇಶ್ ಕಡಬ ವಂದಿಸಿದರು. ಶ್ರೀ ಸಭಾದ ಪದಾಧಿಕಾರಿಗಳು, ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಕುಮಾರ್ ಕಾರ್ಯಕ್ರಮದಲ್ಲಿ ಸಹಕರಿಸಿದರು. ಶ್ರೀಮತಿ ಪುಷ್ಪಾ ಶ್ರೀನಿವಾಸ್ ಯಕ್ಷಗಾನ ಪ್ರಾಯೋಜಿಸಿದರೆ, ಶ್ರೀಮತಿ ಸ್ನೇಹಲತಾ ದಿವಾಕರ್, ಶ್ರೀ ಪ್ರವೀಣ್ ಕುಮಾರ್ ಆದ್ಯಪಾಡಿ, ಡಾ। ಜಯಲಕ್ಷ್ಮೀ ಬಹುಮಾನ ಪ್ರಾಯೋಜಿಸಿದರು.

• ನಮ್ಮ ಬಳಿ ಸಾಧ್ಯ ಇಲ್ಲ ಎನ್ನುವುದು ಯಾವುದೂ ಇಲ್ಲ, ಮನಸ್ಸು ಅಂಜುತ್ತದೆ ಅಷ್ಟೇ. ಧೈರ್ಯಮಾಡಿ ಮುಂದೆ ಸಾಗಿ ಗೆದ್ದರೆ ಇನ್ನೊಬ್ಬರಿಗೆ ಪಾಠ ಹೇಳಿಕೊಡಬಹುದು. ಸೋತರೆ ನಾವೇ ಪಾಠ ಕಲಿಯಬಹುದು. – ಗೌತಮ ಬುದ್ಧ

## ಜ್ಞಾನಶಕ್ತಿ ಮಾಸಪತ್ರಿಕೆ

ಪ್ರಧಾನ ಸಂಪಾದಕರು :
ಎಂ. ಎಸ್. ರಘುನಾಥ ರಾವ್ ಪುತ್ತೂರು
ಮೊಬೈಲ್ : 9448481696

ಸಂಪಾದಕರು :
ಪಿ. ಶ್ರೀಕಾಂತ ರಾವ್
ಮೊಬೈಲ್ : 9343361618

ಸಂಪಾದಕ ಮಂಡಳಿ :
ನಾಗರಾಜ್ ವರ್ಕಾಡಿ
ರಘುವೀರ್ ಪೆರ್ಡೂರು
ಟಿ. ಬಿ. ಮೋಹನ್ ರಾವ್
ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :
ಕರುಣ್ ರಾವ್ ಬೆಳ್ಳೆ
ಅನಿಲ್ ರಾವ್ ಬಿ.ಎಸ್.

ಗೌರವ ಸಲಹೆಗಾರರು :
ಚೇತನ್ ಶರ್ಮ
ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಹರ್ಷಕುಮಾರ್ ಕೇದಿಗೆ


## ಶ್ರೀ ಸಭಾದ ನಾಡಹಬ್ಬ ಸ್ಪರ್ಧಾ ವಿಜೇತರು

**ಸುಗಮ ಸಂಗೀತ ಸ್ಪರ್ಧೆ**

**5ರಿಂದ 15 ವರ್ಷದ ವಿಭಾಗ**

ಪ್ರಥಮ : ಅನನ್ಯಾ ರಾವ್
ದ್ವಿತೀಯ : ಶ್ರೀಯಾ ಉಪಾಧ್ಯಾಯ
ತೃತೀಯ : ಅದ್ವಿತಿ ರಾವ್ ಮತ್ತು ಅದಿತಿ ರಾವ್

**5ರಿಂದ 50 ವರ್ಷದವರ ವಿಭಾಗ**

ಪ್ರಥಮ : ಸಮನ್ವಿತ ಭಟ್
ದ್ವಿತೀಯ : ಸೌಜನ್ಯ ರಾವ್
ತೃತೀಯ – ವರುಣ್ ಕೇದಗೆ

**50 ವರ್ಷದ ಮೇಲ್ಪಟ್ಟ ವಿಭಾಗ**

ಪ್ರಥಮ : ಉಷಾ ನಟರಾಜ್
ದ್ವಿತೀಯ : ಶ್ರೀಧರ ರಾವ್
ತೃತೀಯ : ಜಗನ್ನಾಥ್ ರಾವ್

## ಪ್ರತಿಷ್ಠಿತ ಕರ್ನಾಟಕ ಬ್ಯಾಂಕಿನ ನೂತನ ಅಧ್ಯಕ್ಷರಾಗಿ ಶ್ರೀ ಪಂಜ ಪ್ರದೀಪ್ ಕುಮಾರ್



ಕರ್ನಾಟಕ ಬ್ಯಾಂಕ್‌ನ ಸ್ವತಂತ್ರ ನಿರ್ದೇಶಕ ಶ್ರೀ ಪಂಜ ಪ್ರದೀಪ್ ಕುಮಾರ್ ಅವರನ್ನು ಬ್ಯಾಂಕಿನ ಅರೆಕಾಲಿಕ ಅಧ್ಯಕ್ಷರನ್ನಾಗಿ 2021ರ ನವಂಬರ್ 14ರಿಂದ ಅನ್ವಯವಾಗುವಂತೆ ಮೂರು ವರ್ಷಗಳ ಅವಧಿಯ ನೇಮಕಾತಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ಅನುಮೋದಿಸಿದೆ. ಬ್ಯಾಂಕ್‌ನ ಪ್ರಸಕ್ತ ಅಧ್ಯಕ್ಷ ಪಿ. ಜಯರಾಮ ಭಟ್ ತಮ್ಮ ಅಧಿಕಾರಾವಧಿಯನ್ನು 2021ರ ನವಂಬರ್ 13ಕ್ಕೆ ಪೂರ್ಣಗೊಳಿಸಲಿದ್ದಾರೆ.

ವೃತ್ತಿಪರ ಬ್ಯಾಂಕರ್ ಆಗಿರುವ ಶ್ರೀ ಪಂಜ ಪ್ರದೀಪ್ ಕುಮಾರ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (ಎಸ್.ಬಿ.ಐ.) ವ್ಯವಸ್ಥಾಪಕ ನಿರ್ದೇಶಕರಾಗಿ (ಕಾರ್ಪೊರೇಟ್ ಬ್ಯಾಂಕಿಂಗ್) ನಿವೃತ್ತರಾಗಿದ್ದಾರೆ. ಎಸ್.ಬಿ.ಐ.ಯೊಂದಿಗಿನ 39 ವರ್ಷಗಳ ಒಡನಾಟದಲ್ಲಿ ಅವರು ಬ್ಯಾಂಕಿಂಗ್‌ನ ವಿವಿಧ ಕ್ಷೇತ್ರಗಳ ಅನುಭವವನ್ನು ಪಡೆದಿದ್ದಾರೆ. ಪ್ರಸ್ತುತ ಅವರು 'ಬ್ಯಾಂಕ್ಸ್ ಬೋರ್ಡ್ ಬ್ಯೂರೋ'ನ (ಬಿಬಿಎಫ್) ಸದಸ್ಯರಾಗಿದ್ದಾರೆ. ದ. ಕ. ಜಿಲ್ಲೆಯ ಪಂಜ ಮೂಲದವರಾದ ಪ್ರದೀಪ್ ಕುಮಾರ್ ಕರ್ನಾಟಕ ಬ್ಯಾಂಕ್‌ನಲ್ಲಿ 2020ರ ಆ. 19ರಿಂದ ನಿರ್ದೇಶಕರಾಗಿದ್ದಾರೆ.

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು ಪ್ರಾಯೋಜಿತ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ

**ಪುತ್ತೂರಿನ 'ಶಿವಸದನ'ವು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದಲ್ಲಿ ಆರಂಭಿಸಿರುವ ಹಿರಿಯ ನಾಗರಿಕರ ವಸತಿಗೃಹ ನೂತನ ಯೋಜನೆಗೆ ಸಮಾಜ ಬಾಂಧವರು ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ. ಶ್ರೀ ಸಭಾದ ಸಮಾಜಮುಖೀ ಕಾರ್ಯಕ್ಕೆ ಧನಸಹಾಯವನ್ನು ನೀಡಿ ಉತ್ಸಾಹ ತುಂಬಿ ಸಮಾಜಕ್ಕೆ ಮಾದರಿಯಾಗುತ್ತಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಇವರ ಈ ಕಾರ್ಯವು ಇತರರಿಗೂ ಪ್ರೇರಣೆಯನ್ನು ನೀಡಲಿ ಹಾಗೂ ಶ್ರೀ ಸಭಾದ ನೂತನ ಯೋಜನೆಗಳಿಗೆ ಇನ್ನಷ್ಟು ನೆರವು ಹರಿದು ಬರಲಿ ಎಂದು ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತ ಮಂಡಳಿ ಹಾರೈಸುತ್ತಿದೆ.**

**'ಶಿವಸದನ' ವಸತಿ ನಿಲಯವು ಸಮಾಜ ಬಾಂಧವರ ಸಹಕಾರದಿಂದ ಯಶಸ್ವಿಯಾಗಿ ನಡೆಯುತ್ತಿದ್ದು ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ಹಿರಿಯ ನಾಗರಿಕರ ಸಸ್ಯಾಹಾರಿ ವಸತಿ ನಿಲಯದಲ್ಲಿ ಈಗಾಗಲೇ 20ಕ್ಕೂ ಹೆಚ್ಚು ನಿವಾಸಿಗಳಿದ್ದು, ಎಲ್ಲಾ ಸಸ್ಯಾಹಾರಿಗಳಿಗೆ ಮುಕ್ತವಾಗಿರುತ್ತದೆ. ಅಪೇಕ್ಷಿತರಿಗೆ ಈ ಮಾಹಿತಿಯನ್ನು ನೀಡಿ, ಸಹಕರಿಸಿ.**

**ಸಂಪರ್ಕಿಸಿ :** ಶ್ರೀ ಕರುಣ್ ರಾವ್ ಬೆಳ್ಳೆ ಮೊಬೈಲ್ : **7337634359**
ಶ್ರೀ ಪಿ. ಶ್ರೀಕಾಂತ್ ರಾವ್ ಮೊಬೈಲ್ : **7795116598**

## ದೀಪಾವಳಿಯ ದೀಪ



ಮಿನು ಮಿನುಗುತಾ ಬಂದಿತು ದೀಪಾವಳಿಯ ದೀಪ ।
ಜನ ಮನ ಬೆಳಗುವ ಜಗ ಬೆಳಗಿಸುವ ದೀಪ ।
ತನುವೆಂಬ ಬತ್ತಿಯನು ಹೊಸೆಯುವಾ ದೀಪ ।
ಮಮತೆಯ ತೈಲವನೆರೆದು ಬೆಳಗೋಣ ದೀಪ ॥

ಜ್ಞಾನದ ಜ್ಯೋತಿಯಂತೆ ಎಲ್ಲರ ಮಸ್ತಕದಿ ದೀಪ ನೆಲಸಲಿ ।
ನಾವಿಡುವ ಅಡಿಗಡಿಗೆ ಜ್ಞಾನ ಜ್ಯೋತಿಯ ಬೆಳಗಲಿ ।
ಕೊರೋನಾ ಎಂಬ ಕತ್ತಲೆಯ ಮಹಾಮಾರಿಯನು ಅಳಿಸಲಿ ।
ಮಿಂಚು ಹುಳವಿನಂತೆ ಬೆಳಗಿ ಬಾಳನ್ನು ಉಳಿಸಲಿ ॥

ದೀಪದಿಂದ ದೀಪ ಹೊತ್ತಿಸಿ ಬೆಳಗುತಾ ನೀ ಸಾಗುವೆ ।
ಅಜ್ಞಾನ ಕಳೆದು ಜ್ಞಾನ ಜ್ಯೋತಿಯ ಉರಿಸುವೆ ।
ಮನದಿಂದ ಮನಸ ಸ್ಪಂದಿಸಿ ಮೌಢ್ಯ ಕಳೆಯಲೆತ್ನಿಸುವೆ ।
ಕರುಣೆಸಮಗೆ ಬಾಳ ಸಾತ್ವಿಕ ಗುಣವನ್ನು ದಿವ್ಯ ದೀಪವೆ ॥

ಜೀವ ಪ್ರಭೆಯಾಗಿ ಬೆಳಗಲಿ ಬೆಳಕಿನ ಕಿರಣಗಳು ।
ಜನರಲ್ಲಿ ಮೂಡಿ ಬರುತಲಿರಲಿ ಸಂತೋಷ ಸೌಭಾಗ್ಯಗಳು ।
ಪ್ರಪಂಚ ಬಿಟ್ಟು ತೊಲಗಲಿ ಕೊರೋನಾದ ಭಯ ಭೀತಿಗಳು ।
ಪ್ರಜ್ವಲಿಸಲಿ ದೀಪಾವಳಿಯ ದೀಪದ ಹೊಂಗಿರಣಗಳು ॥

*– ಶ್ರೀಮತಿ ಮಂಜುಳಾ ಮುರಳೀಧರ ರಾವ್ ಮಂಗಳೂರು*


**Sharekhan**
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

ಪತ್ರಿಕೆಗೆ ಶುಭ ಬಯಸುವ–

**ಶ್ರೀ ಕಾಂತಾವರ ಜಯಪ್ರಕಾಶ್ ಮತ್ತು ಶ್ರೀಲತಾ ಹಾಗೂ ತನ್ವಿ, ನಿವೇದ, ದೃತಿ ಮತ್ತು ಧ್ರುವ್**

ಪತ್ರಿಕೆಗೆ ಶುಭ ಬಯಸುವ–

**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

*Prop. : P. Srikanth Rao* Mobile : 9343361618
**M/s. SAMARPAN**
HOUSE OF STATIONERY
"Vijaya Nivas", Opp. Pio Mall
Bejai Church Road, Mangalore - 4


## ಹೊಸ ಬಾಳಿನ ಹೊಸಿಲಲಿ ನಿಂತಿರುವ...



ಶ್ರೀ ಎನ್. ಎಂ. ವಿಜಯಕುಮಾರ್ ಮತ್ತು ಶ್ರೀಮತಿ ಸತ್ಯವತಿಯವರ ಸುಪುತ್ರಿ **ಚಿ| ಸೌ| ಕಾವ್ಯಾಳ** ವಿವಾಹವು ಜೋಗುಳಬೆಟ್ಟು ಶ್ರೀ ಅರವಿಂದ ರಾವ್ ಹಾಗೂ ಶ್ರೀಮತಿ ಸಂಧ್ಯಾ ಇವರ ಸುಪುತ್ರ **ಚಿ| ಕಾರ್ತಿಕ್**‌ನೊಂದಿಗೆ ತಾ. 20–10–2021ನೇ ಬುಧವಾರ ಶ್ರೀ ಸುಬ್ರಹ್ಮಣ್ಯ ಸಭಾ ಸದನದಲ್ಲಿ ನೆರವೇರಿತು.

***

ದೇಶಕೋಡಿ ಶ್ರೀ ಶ್ರೀನಿವಾಸ್ ರಾವ್ ಮತ್ತು ಶ್ರೀಮತಿ ರೋಹಿಣಿ ದೇವಿಯವರ ಸುಪುತ್ರಿ **ಚಿ| ಸೌ| ರಶ್ಮಿ**ಯವರ ವಿವಾಹವು ಮಿಯ್ಯಾರು ಶ್ರೀ ಸೀತಾರಾಮ ಹಾಗೂ ಶ್ರೀಮತಿ ಶಾಂತಾಶ್ರೀಯವರ ಸುಪುತ್ರ **ಚಿ| ಸಾತ್ವಿಕ್**‌ನೊಂದಿಗೆ ತಾ. 20–10–2021ನೇ ಬುಧವಾರ ಸುಳ್ಯ ರೆಂಜಾಳದ ಶ್ರೀ ವಿನಾಯಕ ಸಭಾಭವನದಲ್ಲಿ ಜರುಗಿತು.

***

ಶ್ರೀ ಹತರಂಜ್ ಎಸ್. ದಿವಾಕರ ಮತ್ತು ಶ್ರೀಮತಿ ಕುಸುಮಾರವರ ಸುಪುತ್ರ **ಚಿ| ದೇವಿಪ್ರಸಾದ** ಮತ್ತು ಪಡುಬಿದ್ರೆ ಶ್ರೀ ಅನಂತಪದ್ಮನಾಭ ರಾವ್ ಮತ್ತು ಶ್ರೀಮತಿ ರೇಣುಕಾರವರ ಸುಪುತ್ರಿ **ಚಿ| ಸೌ| ಸ್ವಾತಿ** ಇವರ ವಿವಾಹವು ತಾ. 24–10–2021ನೇ ರವಿವಾರ ಕುಕ್ಕೆಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಸಭಾಂಗಣದಲ್ಲಿ ನೆರವೇರಿತು.

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ವಿದ್ಯಾದಾಯಿನೀ ಪ್ರೌಢಶಾಲೆಯ ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕರಾದ **ಶ್ರೀ ನರಸಿಂಹ ಭಂಡಿ** ಇವರು ತಾರೀಕು 13-10-2021ನೇ ಬುಧವಾರ ದೈವಾಧೀನರಾದರು.

●●●



**ಎಲ್ಲೂರು ರತ್ನಾಕರ ರಾವ್ (68)** ಅವರು ತಾ. 16-10-2021ನೇ ಶನಿವಾರ ನಿಧನ ಹೊಂದಿದರು. ಅವರು ಪ್ರಸಿದ್ಧ ಎಲ್ಲೂರು ಮನೆತನದ ದಿ. ವೆಂಕಟ್ರಮಣಯ್ಯ ಹಾಗೂ ಪದ್ಮಾವತಿ ದಂಪತಿಯವರ ಪುತ್ರ. ಶ್ರೀಯುತರು ಪ್ರತಿಷ್ಠಿತ ತಾಂತ್ರಿಕ ವಿದ್ಯಾಲಯ ಕೆ.ಆರ್.ಇ.ಸಿ.ಯಲ್ಲಿ ತಾಂತ್ರಿಕ ಪದವಿ ಪಡೆದು ಕರಾಡದಲ್ಲಿ ಡೆಲ್ ಸ್ಟಾರ್ ಕಂಪೆನಿಯಲ್ಲಿ ಸೇವೆಯಲ್ಲಿ ಇದ್ದರು. ಕೊರೆಗಾಂವ್‌ನಲ್ಲಿ ಓಂ ಜನರಲ್ ಮಳಿಗೆ ಪ್ರಾರಂಭಿಸಿದ್ದರು ಹಾಗೂ ಶ್ರೀ ಸುಬ್ರಹ್ಮಣ್ಯ ಸಹಕಾರಿ ಸಂಘದ ಮಾಜಿ ನಿರ್ದೇಶಕರಾಗಿದ್ದರು. ಶ್ರೀಯುತರು ಪತ್ನಿ ದೀಪಾ (ಗೀತ), ಮಗಳಂದಿರಾದ ಅಶ್ವಿನಿ, ಅವಂತಿ, ಅಳಿಯ ಗಣೇಶ್, ಅಶ್ವಥ್ ಹಾಗೂ ಮೊಮ್ಮಗ ಶರ್ವಿನ್ ಅವರನ್ನು ಅಗಲಿದ್ದಾರೆ.

●●●



ಕಾಸರಗೋಡು ತಾಲೂಕಿನ ಮಧೂರು ಗ್ರಾಮದ ಎಲ್ಲಂಗಳದ **ಗಣೇಶ್ ಎಲ್ಲಂಗಳ (58)** ಅವರು ದಿನಾಂಕ 21-10-2021ನೇ ಗುರುವಾರ ನಿಧನರಾದರು. ಖಾಸಗಿ ಬಸ್ ನಿರ್ವಾಹಕರಾಗಿದ್ದ ಅವರು ಪತ್ನಿ, ಪುತ್ರ ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ.

●●●

**ಪಡುಬಿದ್ರೆ ಕುಮಾರ ಶರ್ಮ (74)** ಅವರು ತಾ. 18–10–2021ನೇ ಸೋಮವಾರ ಮಂಗಳೂರಿನಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಓರ್ವ ಮಗಳು, ಮಗ ಹಾಗೂ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

●●●

**ಕಡಬ ಕುಂಭಾಟ್ ಮೋಹನ ರಾವ್ (84)** ಅವರು ತಾ. 9–10–2021ನೇ ಶನಿವಾರ ಮಂಗಳೂರಿನಲ್ಲಿ ನಿಧನ ಹೊಂದಿದರು ಇವರು ಓರ್ವ ಮಗ, ಮಗಳು ಹಾಗೂ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

●●●

ಆಳುಗ್ಗೇಲು ದಿ. ರಾಘವೇಂದ್ರ ರಾವ್‌ರವರ ಪತ್ನಿ **ಶ್ರೀಮತಿ ವಸಂತಿ (73)** ಅವರು ತಾ. 2–10–2021ನೇ ಶನಿವಾರ ಮಂಗಳೂರಿನಲ್ಲಿ ನಿಧನ ಹೊಂದಿದರು ಇವರು ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

●●●

ಪೆರ್ವಾಜೆ ಕಾರ್ಕಳ ಸುಬ್ರಹ್ಮಣ್ಯರವರ ಧರ್ಮಪತ್ನಿ **ಶ್ರೀಮತಿ ಅಹಲ್ಯಾ (89)** ನಿಧನ ಹೊಂದಿದರು. ಇವರು 3 ಪುತ್ರರು, 4 ಪುತ್ರಿಯರು ಸಹಿತ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.


ಕೆ. ಲಕ್ಷ್ಮೀನಾರಾಯಣ ಶರ್ಮ
ಅತಿಕಾರಬೈಲು, ಪಗ್ಗ
✆ : 9448043969
8861497325
ಶಿವಗಿರಿ ಎಂಟರ್‌ಪ್ರೈಸಸ್
SHIVAGIRI ENTERPRISES



## ** ಅಪಾರ ಕೀರ್ತಿ ಗಳಿಸಿ **



**ಚಿ| ಕರಣ್ ರಾವ್** ಈ ಬಾರಿಯ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ 596/600 ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇಂಜಿನಿಯರಿಂಗ್ ಪ್ರವೇಶ ಪರೀಕ್ಷೆಗಳಲ್ಲೂ ಅತ್ಯುತ್ತಮ ರ‍್ಯಾಂಕ್‌ಗಳನ್ನು ಗಳಿಸಿರುತ್ತಾನೆ. PESSAT ನಲ್ಲಿ 123ನೇ ರ‍್ಯಾಂಕ್, COMEDK ನಲ್ಲಿ 141ನೇ ರ‍್ಯಾಂಕ್, KCET ಪರೀಕ್ಷೆಯಲ್ಲಿ 480ನೇ ರ‍್ಯಾಂಕ್ JEE (MAINS) ಪರೀಕ್ಷೆಯಲ್ಲಿ 98.6% ಅಂಕ ಪಡೆದುಕೊಂಡಿದ್ದಾನೆ. BITSAT ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು, ಪ್ರತಿಷ್ಠಿತ BITS PICANI ಕಾಲೇಜಿಗೆ ಇಂಜಿನಿಯರಿಂಗ್ ಕಲಿಯಲು ಸೇರಿರುತ್ತಾನೆ. ಇವನು ಮಂಗಳೂರಿನ ಶ್ರೀ ಬಿ.ಎಚ್.ವಿ. ಪ್ರಸಾದ್ Director (Projects) MRPL ಮತ್ತು ಶ್ರೀಮತಿ ಮಮತರವರ ಸುಪುತ್ರ ಹಾಗೂ ಮಂಗಳೂರಿನ CFAL ಕಾಲೇಜಿನ ವಿದ್ಯಾರ್ಥಿ.



**ಕುಮಾರಿ ದೀಕ್ಷಾ ಎಂ. ಎಸ್.** ಈ ಬಾರಿಯ ಇಂಜಿನಿಯರಿಂಗ್ ಇ. ಸಿ. ಕೊನೆಯ ಪರೀಕ್ಷೆಯಲ್ಲಿ ಪ್ರಥಮ ರ‍್ಯಾಂಕ್ ಗಳಿಸಿ, ಚಿನ್ನದ ಪದಕ ಪಡೆದಿದ್ದಾಳೆ. ಈಕೆ ಉಡುಪಿಯ ಡಾ. ಶ್ಯಾಮ ರಾವ್ ಮತ್ತು ಡಾ. ಸ್ವರ್ಣಲತಾರವರ ಸುಪುತ್ರಿ ಹಾಗೂ ಸುರತ್ಕಲ್ ಎನ್.ಐ.ಟಿ.ಕೆ. ಯ ವಿದ್ಯಾರ್ಥಿನಿ.



**ಕುಮಾರಿ ಅಕ್ಷರ ಅರವಿಂದ** ಈ ಬಾರಿಯ ಜೆ.ಇ.ಇ. ಮೈನ್ಸ್ ಪರೀಕ್ಷೆಯಲ್ಲಿ ಶೇಕಡಾ 99.3 ಅಂಕ ಗಳಿಸಿ, ಎನ್.ಐ.ಟಿ. ವಾರಂಗಲ್‌ಗೆ ಆಯ್ಕೆ ಆಗಿದ್ದಾರೆ. ಅಕ್ಷರ ಇತ್ತೀಚೆಗೆ ನಡೆದ ಕಾಮೆಡ್ ಕೆ ಪರೀಕ್ಷೆಯಲ್ಲಿ ಶೇಕಡಾ 99.5 ಅಂಕ ಗಳಿಸಿ 240ನೇ ರ‍್ಯಾಂಕ್ ಪಡೆದಿದ್ದಾಳೆ. ಇವಳು ಬೆಂಗಳೂರಿನ ಶ್ರೀ ಅರವಿಂದ ಹಾಗೂ ಶ್ರೀಮತಿ ಅಶ್ವಿನಿಯವರ ಸುಪುತ್ರಿ.



**ಕುಮಾರಿ ಅದಿತಿ ರಾವ್** ಮಂಗಳೂರು ಸ್ಮಾರ್ಟ್ ಸಿಟಿಯವರು ಆಯೋಜಿಸಿದ (ಆಜಾದಿಕಾ ಅಮೃತ್ ಮಹೋತ್ಸವ) ಡ್ರಾಯಿಂಗ್ ಸ್ಪರ್ಧೆಯಲ್ಲಿ ಮೂರನೇ ಸ್ಥಾನ ಗಳಿಸಿದ್ದಾಳೆ. ಈಕೆ ಮಂಗಳೂರು ಕದ್ರಿಯ ಶ್ರೀ ಯು. ಎಸ್. ವಿವೇಕ್ ರಾವ್ ಮತ್ತು ಶ್ರೀಮತಿ ಕಲಾನಿಧಿ ಇವರ ಸುಪುತ್ರಿ.


ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
ರವಿಕಿರಣ್ ಕ್ಯೊಲ, ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241



Manish Rao U.
Tel : (O) 2223301
Mobile : 9448726499 / 8884284939
NAVA COMPUTERS
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services

1st Floor, Bharath Building, P. M. Rao Road, Hampankatta, Mangaluru - 575 001



ಪತ್ರಿಕೆಗೆ ಶುಭ ಬಯಸುವ–
ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003



Sri Hari Adyapady
Proprietor
Ph : 0824-2251597 (R)
2252119 (O)
Mobile : 9448344612
9964072489
SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE

We undertake all types of Electrical, Plumbing and Sanitary works

# ಶ್ರೀಮತಿ ಶರಾವತಿ ಯು. ಆರ್. ಅವರಿಗೆ ರಾಜ್ಯೋತ್ಸವ ಪ್ರಶಸ್ತಿ



ಸ್ಥಾನಿಕ ಸಮಾಜದ ಬಹುಮುಖ ಪ್ರತಿಭಾವಂತೆ ಎಲ್ಲೂರಿನ ನಿವೃತ್ತ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಶರಾವತಿ ಯು. ಆರ್. ಅವರಿಗೆ 'ಸಮಾಜ ಸೇವೆ' ಕ್ಷೇತ್ರದಲ್ಲಿ 2021ನೇ ಸಾಲಿನ ಉಡುಪಿ ಜಿಲ್ಲೆಯ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಶಿಕ್ಷಕಿ ಶ್ರೀಮತಿ ಶರಾವತಿಯವರು ಸದಾಕ್ರಿಯಾಶೀಲರಾಗಿ, ಶೈಕ್ಷಣಿಕವಾಗಿ ಹಾಗೂ ಸಾಮಾಜಿಕವಾಗಿ ತನ್ನನ್ನು ತೊಡಗಿಸಿಕೊಂಡವರು. ನಿರುದ್ಯೋಗಿಗಳಿಗೆ ಸ್ವಾವಲಂಬನೆ, ಸ್ವ-ಉದ್ಯೋಗದ ಬಗ್ಗೆ ತರಬೇತಿ ನೀಡಿ ಸಾವಿರಾರು ಜನರ ಬಾಳಿಗೆ ದಾರಿ ತೋರಿ ಬೆಳಕನ್ನು ನೀಡಿದವರು.


ಹೋಟೆಲ್ ಉದ್ಯಮಿ ಶ್ರೀ ಉಳ್ಳೂರು ರಾಮಚಂದ್ರ ರಾವ್ ಮತ್ತು ಶ್ರೀಮತಿ ಲಕ್ಷ್ಮಮ್ಮ ಬಾರಕೂರು ಇವರ ಪುತ್ರಿಯಾಗಿ 1959 ಫೆಬ್ರವರಿ 25ರಂದು ಜನ್ಮತಾಳಿದರು. ಬಾರಕೂರಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢ ವಿದ್ಯಾಭ್ಯಾಸ ಪಡೆದ ನಂತರ ಉಡುಪಿಯ ಸರಕಾರಿ ಹೆಣ್ಮಕ್ಕಳ ತರಬೇತಿ ಕೇಂದ್ರದಲ್ಲಿ ಟಿ. ಸಿ. ಎಚ್. ಮುಗಿಸಿದ ಇವರು ಮನೆಯಲ್ಲಿಯೇ ಓದಿ ಪರೀಕ್ಷೆಗೆ ಕುಳಿತು ಹಿಂದಿ ಬಿ. ಎ. ಪದವಿ ಪಡೆದರು. ಇವರ ಜೊತೆಯಲ್ಲಿ ಗಮಕ ಕಲೆಯಲ್ಲಿ ಪ್ರೌಢ, ಚಿತ್ರಕಲೆಯಲ್ಲಿ ಪ್ರೌಢ, ಭಾರತ ಸೇವಾದಳದಲ್ಲಿ ಉನ್ನತ ಸಹಾಯಕ ಮತ್ತು ಬುಲ್ ಬುಲ್ ತರಬೇತಿಗಳನ್ನು ಪಡೆದರು. ಮೈಸೂರಿನ ಇ.ಎಲ್.ಟಿ.ಸಿ ಕೇಂದ್ರದಲ್ಲಿ 30 ದಿನಗಳ ಆಂಗ್ಲಭಾಷಾ ತರಬೇತಿಯನ್ನು ಪಡೆದರು. ಈ ಎಲ್ಲಾ ತರಬೇತಿಗಳಿಂದ ಪರಿಪಕ್ವವಾದ ಇವರು 25 ವರ್ಷಗಳಿಂದ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸಹಾಯಕರಾಗಿ, ಉತ್ತಮ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಭಾರತ ಸೇವಾ ವಲಯದಲ್ಲಿ 15 ವರ್ಷಗಳಿಂದ ಮಾಡಿದ ಉತ್ತಮ ಚಟುವಟಿಕೆಗಳಿಗಾಗಿ ಉಡುಪಿ ಜಿಲ್ಲಾ ಸಮಿತಿ 2003ರಲ್ಲಿ ಜಿಲ್ಲಾ ಪ್ರಶಸ್ತಿ ನೀಡಿ ಗೌರವಿಸಿದೆ. ಚಿತ್ರದುರ್ಗದ ಚಿಂತನ ಬಳಗದವರಿಂದಲೂ, ಜಿಲ್ಲಾ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ಪುಟಾಣಿ ವಿಜ್ಞಾನ ಬಳಗದವರಿಂದಲೂ ಜಿಲ್ಲಾ ಪ್ರಶಸ್ತಿಯನ್ನು ಪಡೆದಿರುವ ಇವರು 2004ರಲ್ಲಿ ರಾಜ್ಯಮಟ್ಟದಲ್ಲಿ "ಉತ್ತಮ ವಿಜ್ಞಾನ ಸಂಘಟಕರು" ಪ್ರಶಸ್ತಿಯನ್ನು ಪಡೆದಿರುವುದು ಇವರ ಎಲ್ಲಾ ಸಾಧನೆಗಳಿಗೆ ಕಿರೀಟ ಇಟ್ಟಂತಾಗಿದೆ. ಬೆಳಪು ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀ ದೇವಿಪ್ರಸಾದ ಶೆಟ್ಟಿಯವರು ಸ್ವ-ಸಹಾಯ ಸಂಘಗಳ ಸಮಾವೇಶದ ಬೃಹತ್ ಸಮಾರಂಭದಲ್ಲಿ ಇವರನ್ನು ಸನ್ಮಾನಿಸಿ ಗೌರವಿಸಿದ್ದಾರೆ.

ಶಾಲಾ ಕೆಲಸದಲ್ಲಿ ಮಾತ್ರವಲ್ಲದೇ ಇತರ ಸಂಘ-ಸಂಸ್ಥೆಗಳಲ್ಲಿಯೂ ಸಕ್ರಿಯವಾಗಿ ತನ್ನನ್ನು ತೊಡಗಿಸಿಕೊಂಡಿರುವ ಇವರು ಎಲ್ಲರೊಡನೆ ಆತ್ಮೀಯತೆಯಿಂದ ಬೆರೆಯುತ್ತಾರೆ. ಭಾರತ ಸೇವಾವಲಯದ ಉಡುಪಿ ತಾಲೂಕಿನ ಜೊತೆಕಾರ್ಯದರ್ಶಿಯಾಗಿ, ಅಧಿನಾಯಕಿಯಾಗಿ ತಮ್ಮ ಸೇವೆ ಸಲ್ಲಿಸಿರುತ್ತಾರೆ. ಪ್ರಸ್ತುತ ಪಣಿಯೂರಿನ ಮುಂದುವರಿಕಾ ಕಲಿಕಾ ಕೇಂದ್ರದಲ್ಲಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿರುವ ಇವರು, ಮೂಡಬಿದ್ರೆಯಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಮಕ್ಕಳ ಸಾಹಿತ್ಯ ಸಂಗಮದ ಅಜೀವ ಸದಸ್ಯರಾಗಿರುತ್ತಾರೆ. ಇತ್ತೀಚೆಗೆ ದೂರದರ್ಶನ ಚಂದನದ 'ಬೆಳಗು' ಕಾರ್ಯಕ್ರಮದಲ್ಲಿ ಇವರ ಸಂದರ್ಶನ ಪ್ರಸಾರವಾಗಿದೆ.

ಸದಾ ಲವಲವಿಕೆಯಿಂದ ಕೂಡಿರುವ ಇವರು ಉಡುಪಿ ಜಿಲ್ಲೆಯಾದ್ಯಂತ ಮಹಿಳಾ ಸಮಾಜ, ಸ್ತ್ರೀಶಕ್ತಿ, ಮುಂದುವರಿಕಾ ಕಲಿಕಾ ಕೇಂದ್ರ, ಸ್ವ-ಸಹಾಯ ಸಂಘಗಳು, ಜೇಸಿ, ರೋಟರಿ, ಲಯನ್ಸ್ ಮುಂತಾದ ಸಂಘ ಸಂಸ್ಥೆಗಳಲ್ಲಿ ನೂರಕ್ಕಿಂತಲೂ ಹೆಚ್ಚು ತರಬೇತಿ ಕಾರ್ಯಾಗಾರಗಳಲ್ಲಿ ಭಾಗವಹಿಸಿ ಪ್ರಶಂಸೆ ಗಳಿಸಿರುತ್ತಾರೆ.

ಶ್ರೀಮತಿ ಶರಾವತಿ ಯು. ಆರ್. ಅವರು ದಿ| ರವಿರಾಜ್‌ರವರ ಪತ್ನಿಯಾಗಿದ್ದು ಅವರ ಇಬ್ಬರು ಪುತ್ರಿಯಂದಿರು ಶ್ರೀಮತಿ ವಿನುತ ಮತ್ತು ಶ್ರೀಮತಿ ಸುಶ್ಮಿತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.



# ಡಾ| ಹರೀಶ್ ಜೋಶಿ ನಿರ್ಮಿಸಿದ ಎರೆಗೊಬ್ಬರ ತೊಟ್ಟಿಗೆ ಪೇಟೆಂಟ್




ನಗರದ ಸೈಂಟ್ ಅಲೋಶಿಯಸ್ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಡಾ| ಎಸ್. ಹರೀಶ್ ಜೋಶಿ ಅವರು ಕಸ ವಿಲೇವಾರಿಗೆ ಸಂಬಂಧಪಟ್ಟ ವೈಜ್ಞಾನಿಕ ತಳಹದಿಯ ಮೇಲೆ ನಿರ್ಮಿಸಿದ ಗೃಹೋಪಯೋಗಿ ಎರೆಗೊಬ್ಬರ ತೊಟ್ಟಿಗೆ 2015ರಿಂದ 20 ವರ್ಷಗಳ ವರೆಗೆ ಪೇಟೆಂಟ್ ದೊರೆಕಿದೆ.

ಈ ಘಟಕವು ಫ್ರಾನ್ಸ್ ಇಂಗ್ಲೆಂಡ್ ಮತ್ತು ಅಮೇರಿಕದಲ್ಲಿರುವ ಎರೆತೊಟ್ಟಿಯಿಂದ ತೀರಾ ಭಿನ್ನವಾದುದು. ಸುಮಾರು ನಾಲ್ಕೈದು ವರ್ಷಗಳಿಂದ ಈ ಘಟಕ ಹಲವಾರು ವಿದ್ಯಾಸಂಸ್ಥೆ ಮನೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಎರೆತೊಟ್ಟಿಯು ಫೈಬರ್ ಗ್ಲಾಸ್ ನಿರ್ಮಿತ ಎರಡು ಕೋಣೆ ಹೊಂದಿದ್ದು, ಎರಡು ಹಂತದ ಎರೆಗೊಬ್ಬರ ಪ್ರಕ್ರಿಯೆ ಏಕಕಾಲದಲ್ಲಿ ಜರಗುವಂತೆ ವಿನ್ಯಾಸಗೊಳಿಸಲಾಗಿದೆ.

ಈ ಸಣ್ಣ ಘಟಕಕ್ಕೆ ನಾಲ್ಕು ಸುತ್ತಲೂ ಹೊರಬದಿಯಲ್ಲಿ ಹಲವಾರು ರಂಧ್ರಗಳಿರುವ ಗಾಳಿ ಕೋಣೆಗಳಿದ್ದು, ಘಟಕಕ್ಕೆ ನಿರಂತರವಾಗಿ ಶುದ್ಧಗಾಳಿ ಒದಗಿಸುತ್ತದೆ. ಈ ಪ್ರಕ್ರಿಯೆಯು ಎರೆಹುಳು ಇರುವಿಕೆ ಮತ್ತು ಸಂತಾನಾಭಿವೃದ್ಧಿಗೆ ಸಹಾಯವಾಗುತ್ತದೆ. ಯಾವುದೇ ಸಂದರ್ಭದಲ್ಲಿ ಇರುವೆ, ಇಲಿ, ಹೆಗ್ಗಣ, ಕಪ್ಪೆ ಹಾಗೂ ಪಕ್ಷಿಗಳ ಹಾವಳಿಯಿಂದ ಈ ಘಟಕ ಮುಕ್ತವಾಗಿದೆ. ಸ್ಮಾರ್ಟ್ ಎರೆತೊಟ್ಟಿಯಿಂದ ವರ್ಷವೊಂದಕ್ಕೆ 4ರಿಂದ 5 ಬಾರಿ ಗೊಬ್ಬರವನ್ನು ಉತ್ಪಾದಿಸಬಹುದು. ಪ್ರತೀ ಬಾರಿ 20 ರಿಂದ 25 ಕೆ.ಜಿ.ಯಷ್ಟು ಗೊಬ್ಬರ ಪಡೆಯಬಹುದಾಗಿದೆ.

# ನವರಾತ್ರಿ ಮಹೋತ್ಸವ

ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ನವರಾತ್ರಿಯ ಪ್ರತಿದಿನ ರಾತ್ರಿ ವಿಶೇಷ ದುರ್ಗಾ ಪೂಜೆ ಜರುಗಿತು. ತಾರೀಕು 13-10-2021ನೇ ಬುಧವಾರ ವೇದಮೂರ್ತಿ ಶ್ರೀ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ, ಶ್ರೀ ಪ್ರತಾಪ್ ಶರ್ಮ ನೇತೃತ್ವದಲ್ಲಿ ಸಾರ್ವಜನಿಕ ಚಂಡಿಕಾ ಹೋಮ ಜರುಗಿತು. ಹೋಮದ ಕರ್ತೃಗಳಾಗಿ ಇನ್ನ ಕೇದಗೆ ಶ್ರೀ ಕೃತಿವಾಸ್ ಶರ್ಮ ಕುಟುಂಬಸ್ಥರು, ನಂದಿಕೂರು ಶ್ರೀ ಜನಾರ್ದನ್ ರಾವ್, ಇನ್ನ ಶ್ರೀ ಲಕ್ಷ್ಮಿಕಾಂತ್ ರಾವ್, ಶ್ರೀಮತಿ ರೇಣುಕಾ ಅನಂತ್ ಪದ್ಮನಾಭ ರಾವ್, ಡಾ. ಎನ್. ಟಿ. ಅಂಚನ್‌ರವರು ಉಪಸ್ಥಿತರಿದ್ದರು. ಪ್ರಧಾನ ಅರ್ಚಕರಾದ ಶ್ರೀ ಜಗಧಾಭಿರಾಮ ಸ್ವಾಮಿ, ಟ್ರಸ್ಟ್ ಅಧ್ಯಕ್ಷರಾದ ಶ್ರೀ ರಘುವೀರ್ ರಾವ್, ಕಾರ್ಯದರ್ಶಿ ಶ್ರೀ ಶ್ರೀನಿವಾಸ್ ಶರ್ಮ, ಖಜಾಂಜಿ ಶ್ರೀ ಪಿ. ಡಿ. ಶೇಖರ್ ರಾವ್ ಮತ್ತು ಶ್ರೀ ನರೇಂದ್ರ ಸ್ವಾಮಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



# ಬಂದೆಯ ಬಾಳಿನ ಬೆಳಕಾಗಿ

ಮಿತ್ತೂರು ಶ್ರೀ ದೀಪಕ್ ರಾವ್ ಮತ್ತು ಶ್ರೀಮತಿ ಅಮೃತಾ ದಂಪತಿಗಳಿಗೆ ತಾರೀಕು 24-10-2021ನೇ ರವಿವಾರ ಗಂಡು ಮಗುವಿನ ಜನನ.

ಬಾಯಾರು ಕುದ್ರೆಬೆಟ್ಟು, ಕಲ್ಲಡ್ಕ ಶ್ರೀಯುತ ರಕ್ಷಿತ್ ಮತ್ತು ಶ್ರೀಮತಿ ಸುಮಾರವರಿಗೆ ತಾರೀಕು 3-11-2021ನೇ ಬುಧವಾರ ಗಂಡು ಮಗುವಿನ ಜನನ.


ರಾಮಾ ಅಟೋಮೊಬೈಲ್ಸ್



ಮಾರುತಿ ವಾಹನ ತಜ್ಞರು



ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳ ಬೆಳಗಲಿ!
ಶುಭಾಶಯಗಳೊಂದಿಗೆ -
G. K. KOLPE
House No. 7-3-31-D1, 'Vaishnavi' (Upstairs)
Vadiraja 2nd Cross, Bailakere, Udupi - 576 101
Mobile : 9449903002

# ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬ್ರಹ್ಮಾವರ ತಾಲೂಕು ಪ್ರಥಮ ವಾರ್ಷಿಕ ಮಹಾಸಭೆ



ದಿನಾಂಕ 24-10-2021ನೇ ಭಾನುವಾರ ಮಂದಾರ್ತಿಯ ಕಲ್ಲು ದೇವಸ್ಥಾನದ ಶ್ರೀ ಶಂಭುಶಂಕರ ರಾವ್ ಇವರ 'ಲಕ್ಷ್ಮೀಸದನ' ಮನೆಯಲ್ಲಿ ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬ್ರಹ್ಮಾವರ ತಾಲೂಕು ಇದರ ಪ್ರಥಮ ವಾರ್ಷಿಕ ಮಹಾಸಭೆಯನ್ನು ಹಮ್ಮಿಕೊಳ್ಳಲಾಯಿತು.

ಶೃಂಗೇರಿ ಶ್ರೀ ಶಾರದಾ ಪೀಠದ ಉಡುಪಿ ಪ್ರಾಂತೀಯ ಧರ್ಮಾಧಿಕಾರಿಗಳಾದ ಶ್ರೀ ವಾಗೀಶ ಶಾಸ್ತ್ರೀ ಇವರ ಮಾರ್ಗದರ್ಶನದಲ್ಲಿ ಆಗಸ್ಟ್ 9ರಿಂದ 19ರ ವರೆಗೆ ಏರ್ಪಡಿಸಲಾಗಿದ್ದ ಶಿವ ಪಂಚಾಕ್ಷರೀ ಜಪ ಯಜ್ಞದಲ್ಲಿ ಒಟ್ಟು 111 ಮಂದಿ ಸದಸ್ಯರು ಸುಮಾರು 30 ಲಕ್ಷ ಶಿವ ಪಂಚಾಕ್ಷರೀ ಜಪ ಪಠಿಸಿದ್ದು, ಇಂದು ಮಹಾಸಭೆಯ ಪ್ರಯುಕ್ತ ಶ್ರೀ ಗಣಪತಿ ಹೋಮ ಮತ್ತು ಶಿವ ಪಂಚಾಕ್ಷರೀ ಹೋಮವನ್ನು ಶ್ರೀ ವಾಗೀಶ ಶಾಸ್ತ್ರೀಯವರ ಮಾರ್ಗದರ್ಶನದಂತೆ ನಡೆಸಲಾಯಿತು. ಶ್ರೀ ಜ್ಞಾನಶಕ್ತಿ ಭಜನಾ ಬಳಗದವರು ಭಜನಾ ಕಾರ್ಯಕ್ರಮ ನೀಡಿದರು.

ಉಪಾಹಾರದ ಬಳಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ಲಕ್ಷ್ಮೀ ಮಂಜುನಾಥ ವೇದಿಕೆಯಲ್ಲಿ ಆರಂಭಗೊಂಡಿತು. ಯಕ್ಷಗಾನ, ನೃತ್ಯ, ಭರತನಾಟ್ಯ, ಸಿನಿಮಾ ಹಾಡುಗಳಿಗೆ ನೃತ್ಯ, ಹಾಡುಗಳು, ಕೊಳಲು ವಾದನ, ಕಿರುಪ್ರಹಸನ ಎಲ್ಲವನ್ನೂ ಅಚ್ಚುಕಟ್ಟಾಗಿ ಪ್ರದರ್ಶಿಸಲಾಯಿತು.

ಮಹಾಸಭೆಯ ಅಧ್ಯಕ್ಷತೆಯನ್ನು ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಇದರ ಅಧ್ಯಕ್ಷರಾದ ಶ್ರೀ ಮಂಜುನಾಥ ರಾವ್ ಇವರು ವಹಿಸಿದ್ದರು. ಅತಿಥಿಗಳಾಗಿ ಶ್ರೀ ಸ್ಥಾನಿಕ ಮಹಾಮಂಡಲ (ರಿ.), ಮಂಗಳೂರು ಇದರ ಸ್ಥಾಪಕಾಧ್ಯಕ್ಷರಾದ ಶ್ರೀಯುತ ಸಿ. ಎಸ್. ರಾವ್, ಮಹಾಮಂಡಲದ ಕಾರ್ಯದರ್ಶಿಗಳಾದ ಶ್ರೀಯುತ ಡಾ। ಸುದರ್ಶನ ರಾವ್, ಮಹಾಮಂಡಲದ ಉಪಾಧ್ಯಕ್ಷರಾದ ಶ್ರೀಯುತ ಉದಯ ಬಾರ್ಕೂರು, ಪಡುಬಿದ್ರೆ ಶ್ರೀ ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಇದರ ಅಧ್ಯಕ್ಷರಾದ ಶ್ರೀಯುತ ಎಂ. ಕೆ. ಮೋಹನ್ ರಾವ್, ಸುರತ್ಕಲ್ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಇದರ ಅಧ್ಯಕ್ಷರಾದ ಶ್ರೀಯುತ ಮಾಧವ ರಾವ್, ಉಡುಪಿ ಜಿಲ್ಲಾ ಬ್ರಾಹ್ಮಣ ಸಭಾದ ಕಾರ್ಯದರ್ಶಿಯಾದ ಶ್ರೀಯುತ ಗಣೇಶ್ ರಾವ್ ಕುಂಭಾಶಿ ಆಗಮಿಸಿದ್ದರು. ತತ್ವಶಾಸ್ತ್ರದಲ್ಲಿ ವಿದ್ವತ್ ಪದವಿ ಪಡೆದ, ಭಗವದ್ಗೀತೆ ಮತ್ತು ಮನೋನಿರ್ವಹಣೆ ಎಂಬ ವಿಷಯದಲ್ಲಿ ಸಂಶೋಧನಾ ಕಾರ್ಯ ನಡೆಸಿ 2019ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಿಂದ ಪಿ.ಹೆಚ್.ಡಿ. ಪದವಿ ಪಡೆದ, ಅಂತರ್ಜಾಲೀಯ ವೇದ ಸಂಸ್ಕೃತ ಶಾಲೆಯನ್ನು ಪ್ರಾರಂಭಿಸಿದ ರಾಮಾಯಣ, ಮಹಾಭಾರತ, ಭಗವದ್ಗೀತೆ, ತತ್ವಶಾಸ್ತ್ರ, ಉಪನಿಷತ್‌ಗಳ ಬೋಧನೆ ಜತೆಗೆ ಪೂಜಾಕ್ರಮ, ಹೋಮ, ಹವನಾದಿಗಳ ಬೋಧನೆ ಮಾಡುತ್ತಿರುವ, ಸಂಪೂರ್ಣ ಭಗವದ್ಗೀತೆಯನ್ನು ಕಂಠಪಾಠ ಮಾಡಿ ಅರ್ಥಸಮೇತ ಪಠಿಸಿದ್ದಕ್ಕಾಗಿ ಶೃಂಗೇರಿ ಶ್ರೀ ಜಗದ್ಗುರುಗಳಿಂದ ಆಶೀರ್ವಾದ ರೂಪದಲ್ಲಿ ರೂಪಾಯಿ 21,000/-ವನ್ನು ಪುರಸ್ಕಾರವಾಗಿ ಪಡೆದ ಹೆಗ್ಗಳಿಕೆ ಹೊಂದಿರುವ, ಯಕ್ಷಗಾನ ತಾಳಮದ್ದಳೆಯ ಅರ್ಥಗಾರಿಕೆ, ಧಾರ್ಮಿಕ ಪ್ರವಚನಕಾರರಾದ ಪ್ರಸ್ತುತ ಪುತ್ತೂರಿನ ಅಂಬಿಕಾ ಮಹಾವಿದ್ಯಾಲಯದ ಪ್ರಾಂಶುಪಾಲರಾದ, ವಿದ್ವಾನ್ ಡಾ। ವಿನಾಯಕ ಭಟ್ಟ ಗಾಳಿಮನೆ ಇವರಿಂದ 'ಬ್ರಾಹ್ಮಣ್ಯ ಮತ್ತು ಜವಾಬ್ದಾರಿಗಳು' ಎಂಬ ವಿಚಾರದ ಕುರಿತು ಅತ್ಯುತ್ತಮ ಉಪನ್ಯಾಸ ಏರ್ಪಡಿಸಲಾಗಿತ್ತು. ಜಗತ್ತಿಗೇ ಎಲ್ಲವನ್ನೂ ನೀಡಿರುವ ನಮ್ಮ ಭಾರತೀಯ ಸಂಸ್ಕೃತಿಯು ಈಗ 'ಎಲ್ಲವನ್ನೂ ಅರಿತಿರುವಲ್ಲಿ ಆಚಾರವೊಂದೇ ಬಾಕಿ' ಎಂಬ ಮಟ್ಟ ತಲುಪಿದ್ದು ಎಚ್ಚರಿಕೆಯ ಗಂಟೆಯೇ ಸರಿಯೆಂಬುದನ್ನು ಮನೋಜ್ಞವಾಗಿ ವಿವರಿಸಿದರು. ಮಹಾಮಂಡಲದ ಉಪಾಧ್ಯಕ್ಷರಾದ ಶ್ರೀ ಉದಯ ಬಾರ್ಕೂರು ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘದ ಜತೆ ಕಾರ್ಯದರ್ಶಿಯಾದ ಶ್ರೀ ರವೀಂದ್ರ ರಾವ್ ವಾರ್ಷಿಕ ವರದಿಯನ್ನು ವಾಚಿಸಿದರು. ಖಜಾಂಜಿ ಶ್ರೀ ಭಾಸ್ಕರ ಹೆಬ್ಬಾರ್ ಇವರು ವಾರ್ಷಿಕ ಲೆಕ್ಕಪತ್ರವನ್ನು ಮಂಡಿಸಿ ಅನುಮೋದನೆ ಪಡೆದುಕೊಂಡರು.

ಇಂದಿನ ಕಾರ್ಯಕ್ರಮದ ಊಟೋಪಚಾರ ಮತ್ತು ಇತರ ಕಾರ್ಯಕ್ರಮಗಳ ಪ್ರಾಯೋಜಕರನ್ನು ವಿಶೇಷವಾಗಿ ಸನ್ಮಾನಿಸಲಾಯಿತು. ಸಂಘದ ಪೋಷಕರಾದವರನ್ನು ಮತ್ತು ಪ್ರದಾತೃ ಸದಸ್ಯತ್ವ ಪಡೆದವರನ್ನು ಗೌರವದಿಂದ ಗುರುತಿಸಲಾಯಿತು.

ಅತಿಥಿಗಳಾದ ಶ್ರೀಯುತ ಸಿ. ಎಸ್. ರಾವ್, ಡಾ। ಸುದರ್ಶನ್ ರಾವ್ ಸಂದರ್ಭೋಚಿತವಾಗಿ ಮಾತನಾಡಿ ನೋಂದಾಯಿತವಾಗಿರುವ ಈ ಸಂಘವು ಶೀಘ್ರ ಸ್ವಂತ ಕಟ್ಟಡವನ್ನು ರಚಿಸಿ ಸಮಾಜಮುಖಿಯಾಗಿ ಉತ್ತರೋತ್ತರ ಅಭಿವೃದ್ಧಿ ಹೊಂದಲಿ ಎಂದು ಹಾರೈಸಿದರು.

ಸ್ಥಾನಿಕ ಸಮಾಜದ ಹಲವಾರು ಸಂಘಗಳ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಮಧ್ಯಾಹ್ನದ ಭೋಜನದ ಬಳಿಕ ಕಾರ್ಯಕ್ರಮ ಸಮಾಪನಗೊಂಡಿತು.


Prop. : *Kishore Kumar Kedige* Ph. : 2231524
M. : 9880726325



**KYADIGE AUTOMOBILES**
**Opp. to D. P. Stores Main Road, B. C. Road, Bantwal Tq.**
***Dealers in : 2 & 3 WHEELERS SPARES***

ಪತ್ರಿಕೆಗೆ ಶುಭ ಬಯಸುವ–
**ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು**
**ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ**
**ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ**

Muralidhara Rao Adyapadi
Proprietor
Mob : 94480 27259
99803 16434



**SPANDANA**
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO



**PRAMOD**
**AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
**Prop. : Ln. K. HARSHA KUMAR**

ಪತ್ರಿಕೆಗೆ ಶುಭ ಬಯಸುವ–



**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**

**PREETHIKA**
**AUTOMOBILES**
2493633
9845851573
*Wholesale & Retail Dealers in :*
***2 & 3 WHEELERS, SPARES & ACCESSORIES***
**KARANGALPADY, MANGALORE - 575 003**
***Dealers in :***
**Minda Switches, M. K. Products, Swiss Auto Products, Power Coils**

# ಶ್ರೀ ಶಾರದಾ ಮಂಟಪದಲ್ಲಿ ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತ ಅರ್ಚಕ ಪರಿಪಾಲನಾ ಸಭಾ, ಮಂಗಳೂರು ಇದರ ಪ್ರಥಮ ವಾರ್ಷಿಕೋತ್ಸವ...



ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತ ಅರ್ಚಕ ಪರಿಪಾಲನಾ ಸಭಾ, ಮಂಗಳೂರು ಇದರ ಪ್ರಥಮ ವಾರ್ಷಿಕೋತ್ಸವ ಕಾರ್ಯಕ್ರಮವು ಉಡುಪಿ ಶ್ರೀ ಶಾರದಾ ಮಂಟಪದಲ್ಲಿ ಸಂಪನ್ನಗೊಂಡಿತು.

ಪ್ರಾತಃಕಾಲದಲ್ಲಿ ತ್ರಿನಾಳೀಕೇರ ಗಣಯಾಗ ಹಾಗೂ ಶ್ರೀ ಗಾಯತ್ರಿ ಯಾಗ ದೊಂದಿಗೆ ಆರಂಭಗೊಂಡು ಮಹಾ ಪೂರ್ಣಾಹುತಿಯೊಂದಿಗೆ ಸಂಪನ್ನಗೊಂಡಿತು.

ಶ್ರೀ ಶಾರದಾ ಮಂಟಪದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ದಂಪತಿಗಳು ಯಾಗದ ಪವಿತ್ರಪಾಣಿಯಾಗಿ ತಮ್ಮನ್ನು ತೊಡಗಿಸಿಕೊಂಡು ಸಂಪೂರ್ಣ ಸಹಕಾರವಿತ್ತರು.

ವೇದಬ್ರಹ್ಮ ಶ್ರೀ ಜಗದೀಶ ಉಪಾಧ್ಯಾಯರು ಹಾಗೂ ವೇದಬ್ರಹ್ಮ ಶ್ರೀ ಕೃಷ್ಣರಾಜ್ ಭಟ್ಟರ ವೇದಘೋಷ, ಮಾತೆಯರ ಪ್ರಾರ್ಥನೆ ಹಾಗೂ ವೇದ ಬ್ರಹ್ಮಶ್ರೀ ಪ್ರತಾಪ್ ಶರ್ಮ ಮತ್ತು ವೇದಬ್ರಹ್ಮ ಶ್ರೀ ಅರವಿಂದ ಶರ್ಮ ಇವರ ಗುರುವಂದನೆಯೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು.

ಅಭ್ಯಾಗತರ ಕಿರುಪರಿಚಯ, ಸ್ವಾಗತ ವಚನದೊಂದಿಗೆ ಪ್ರಾಸ್ತಾವಿಕ ಭಾಷಣವನ್ನು ಸಂಘದ ಅಧ್ಯಕ್ಷರಾದ ವೇದಮೂರ್ತಿ ಶ್ರೀ ಗುರುಪ್ರಸಾದ್ ಹೆಬ್ಬಾರ್ ನೆರವೇರಿಸಿದರು.

ಕಾರ್ಯದರ್ಶಿ ವೇದಮೂರ್ತಿ ಶ್ರೀ ಚಿದಾನಂದ ಶ್ಯಾನುಭೋಗರು ವರದಿವಾಚನ ಗೈದರು.

ಪ್ರಧಾನ ಉಪನ್ಯಾಸಕರಾದ ಶ್ರೀ ನಟರಾಜ್ ರಾವ್ ಪರ್ಕಳ ಇವರು ಗಾಯತ್ರಿ ಅನುಷ್ಠಾನದ ಬಗ್ಗೆ ಮನ ಮುಟ್ಟುವಂತೆ ವಿವರಿಸಿದರು.


ಸ್ಥಾನಿಕ ಮಹಾಮಂಡಲದ ಅಧ್ಯಕ್ಷರಾದ ಶ್ರೀ ಬೆಳುವಾಯಿ ದೇವಾನಂದ್ ಭಟ್ ಸಂಘಕ್ಕೆ ಶುಭಹಾರೈಸಿ ಅಗತ್ಯ ಮಾರ್ಗದರ್ಶನವನ್ನು ನೀಡಿದರು. ಶ್ರೀ ಮಂಜುನಾಥ ಹೆಬ್ಬಾರ್ ಸಂಘಕ್ಕೆ ಪ್ರೋತ್ಸಾಹ ನೀಡಿ ಶುಭ ಹಾರೈಸಿದರು.

ಶೃಂಗೇರಿ ಮಠದ ಉಡುಪಿ ಪ್ರಾಂತೀಯ ಧರ್ಮಾಧಿಕಾರಿಗಳಾದ ವೇದಬ್ರಹ್ಮ ಶ್ರೀ ವಾಗೀಶ ಶಾಸ್ತ್ರೀಯವರು ಬ್ರಾಹ್ಮಣ್ಯ ಹಾಗೂ ಬ್ರಾಹ್ಮಣರ ಕರ್ತವ್ಯದ ಬಗ್ಗೆ ಅಗತ್ಯ ಮಾಹಿತಿಯನ್ನು ನೀಡಿದರು.

ಗೌರವಾಧ್ಯಕ್ಷ ವೇದಾಂತ ಶಿರೋಮಣಿ ಭವಾನೀ ಶಂಕರ ಉಪಾಧ್ಯಾಯರು ಉಪಸ್ಥಿತರಿದ್ದರು. ವೇದಬ್ರಹ್ಮ ಶ್ರೀ ಅರವಿಂದ ಶರ್ಮ ಬೆಳ್ಳೆ ವಂದಿಸಿದರು. ವೇದಮೂರ್ತಿ ಶ್ರೀ ಜಗದಾಭಿರಾಮ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದ ಸಂಪೂರ್ಣ ವ್ಯವಸ್ಥೆಯನ್ನು ಉಡುಪಿ ಶ್ರೀ ಶಾರದಾ ಮಂಟಪ ಇವರು ವಹಿಸಿ ಕೊಂಡಿದ್ದರು. ಶ್ರೀ ಶಾರದಾ ಮಂಟಪದವರ ಅಚ್ಚುಕಟ್ಟಾದ ವ್ಯವಸ್ಥೆ ಹಾಗೂ ಪ್ರೋತ್ಸಾಹ ಹೃದಯಸ್ಪರ್ಶಿಯಾಗಿತ್ತು.

# ಶಿವನಿಗೆ ಬಲು ಇಷ್ಟವಾದ ಬಿಲ್ವಪತ್ರೆ





ರೊಟೇಸೀ ಕುಟುಂಬಕ್ಕೆ ಸೇರಿದ ಒಂದು ಪವಿತ್ರವೃಕ್ಷ. ಇದರ ಶಾಸ್ತ್ರೀಯ ಹೆಸರು ಈಗಲ್ ಮಾರ್ ಮೆಲೋಸ್. ಈ ಹೆಸರು ಯಾರಿಗೂ ಅರ್ಥವಾಗುವುದಿಲ್ಲವಾದ್ದರಿಂದ ಈ ಹೆಸರನ್ನು ಉಪಯೋಗಿಸುವುದಿಲ್ಲ. ಇದು ಭಾರತಾದ್ಯಂತ ಕಾಣಬರುವ ಮರ. ಈಶ್ವರನ ದೇವಾಲಯಗಳ ಸಮೀಪದಲ್ಲಿ ಇದನ್ನು ಬೆಳೆಸುವುದರಿಂದ ಪೂಜೆಗೆ ಸಾಕಷ್ಟು ಬಿಲ್ವಪತ್ರೆ ದೊರೆಯುತ್ತದೆ ಎಂಬ ದೃಷ್ಟಿಯಿಂದ ಇದನ್ನು ಬೆಳೆಸುತ್ತಾರೆ. ಈ ಮರ ಸುಮಾರು 18ರಿಂದ 30 ಅಡಿ ಎತ್ತರವಾಗಿರುತ್ತದೆ. ಬಿಲ್ವಪತ್ರೆಯು ಶಿವನ ಪೂಜೆಗೆ ಅತ್ಯಂತ ಶ್ರೇಷ್ಠ.

ಈ ಗಿಡದಲ್ಲಿ ಪತ್ರೆಯ ಜೊತೆಗೆ ಕಾಯಿಯೂ ಬಿಡುತ್ತದೆ. ಸಾಮಾನ್ಯವಾಗಿ ಇವು ಬೇಲದ ಹಣ್ಣಿನ  ರೀತಿಯಲ್ಲೇ ಇರುತ್ತವೆ. ಇದಕ್ಕೆ ಗಟ್ಟಿಯಾದ ಸಿಪ್ಪೆಯೂ, ನಯವಾದ ಹಳದಿ ಬಣ್ಣದ ಸುವಾನೆಯುಳ್ಳ ತಿರುಳು ಇರುತ್ತದೆ. ಇದು ಸಿಹಿಯಾಗಿರುತ್ತದೆ. ಆದುದರಿಂದ ಬೇಲದ ಹಣ್ಣಿನ ಪಾನಕದಂತೆ, ಬಿಲ್ವದ ಹಣ್ಣಿನಿಂದಲೂ ಸಿಹಿಯಾದ ಪಾನಕವನ್ನು ತಯಾರಿಸುತ್ತಾರೆ. ಮಾಗಿದ ಹಣ್ಣಿನಿಂದ ಉಪ್ಪಿನಕಾಯಿಯನ್ನು ಹಾಕುತ್ತಾರೆ. ಇಷ್ಟೇ ಅಲ್ಲದೆ ಬಿಲ್ವಪತ್ರೆಯ ಹಣ್ಣಿನಿಂದ ಶರಬತ್ ತಯಾರಿಸುತ್ತಾರೆ. ಇದನ್ನು ಜರಡಿಯ ಮೂಲಕ ಶೋಧಿಸಿದರೆ ಸಣ್ಣ ಬೀಜಗಳು ಬಾಯಿಗೆ ತೊಂದರೆ ಉಂಟುಮಾಡುವುದಿಲ್ಲ. ಬಿಲ್ವಪತ್ರೆಯ ಹಣ್ಣಿನಿಂದ ಮೊರಬ್ಬವನ್ನು ಮಾಡುತ್ತಾರೆ. ಇದು ಆಮಶಂಕೆಗೆ ರಾಮಬಾಣವಿದ್ದಂತೆ. ಬಿಲ್ವ ಗಿಡದ ಕಾಂಡದಲ್ಲಿ ಚಾಕುವಿನಿಂದ ಕತ್ತರಿಸಿದರೆ ಗೋಂದು ಹೊರಹೊಮ್ಮುತ್ತದೆ. ಇದನ್ನು ನೀರಿನಲ್ಲಿ ಕುದಿಸಿ, ಬೆಲ್ಲವನ್ನು ಹಾಕಿದ ಆ ಕಷಾಯವನ್ನು ಸೇವಿಸಿದರೆ ವಿಷಮಶೀತಜ್ವರ, ಪದೇ ಪದೇ ಬರುವ ಜ್ವರ ಮುಂತಾದವುಗಳು ಗುಣವಾಗುತ್ತವೆ. ಪಾನಕ ಮಾಡಿದ ನಂತರ ಬಂದ ತಿರುಳನ್ನು ತಲೆಗೆ ತಿಕ್ಕಿಕೊಂಡು ಸ್ನಾನಮಾಡಿದರೆ ತಲೆಹೊಟ್ಟು ಉದುರುವುದು (ಡ್ಯಾಂಡ್ರಪ್) ನಿಂತುಹೋಗುತ್ತದೆ.

ಬಿಲ್ವಪತ್ರೆಯ ಬಗ್ಗೆ ಒಂದು ಜಾನಪದ ಕಥೆ ಪ್ರಚಲಿತವಾಗಿದೆ. ಬಿಲ್ವಪತ್ರೆ ಮರಕ್ಕೂ ಸಗಣಿಗೂ ಸ್ಪರ್ಧೆ ಏರ್ಪಟ್ಟಿತು. ನಾನು ನೇರವಾಗಿ ಶಿವಲಿಂಗದ ಮೇಲೆ ನನ್ನನ್ನು ಇರಿಸಿ ಪೂಜೆ ಮಾಡುತ್ತಾರೆ. ಬಿಲ್ವಪತ್ರೆಯ ಹಾರವನ್ನು ನನ್ನ ಕೊರಳಿಗೆ ಹಾಕುತ್ತಾರೆ. ಭಕ್ತರು ಈ ದೃಶ್ಯವನ್ನು ಕಂಡು ಸಾಕ್ಷಾತ್ ಶಿವನೇ ಈ ಬಿಲ್ವಪತ್ರೆಯಲ್ಲಿ ಅಡಗಿದ್ದಾನೆ ಎಂದು ತಿಳಿಯುತ್ತಾರೆ. ಅದಕ್ಕೆ ಸಗಣಿ ಹೇಳಿತಂತೆ ನೀನು (ಅಂದರೆ ಬಿಲ್ವಪತ್ರೆ) ಎರಡು ಮೂರುದಿನಗಳು ಬಾಡದೆ ಇರಬಹುದು. ಅನಂತರ ನಿನ್ನನ್ನು ಭಕ್ತಿಯಿಂದ ಕಣ್ಣಿಗೆ ಒತ್ತಿಕೊಂಡು ಎಸೆದುಬಿಡುತ್ತಾರೆ. ಆದರೆ ಸಗಣಿ ಹೇಳಿತು. ನನ್ನನ್ನು ಒಣಗಿಸಿ ಉಂಡೆಗಳನ್ನಾಗಿ ಮಾಡಿ ಅದನ್ನು ಕೆಂಡದಲ್ಲಿ ಸುಟ್ಟರೆ ವಿಭೂತಿಯಾಗುತ್ತೇನೆ ಎಲ್ಲರೂ ಹಣೆಯಲ್ಲಿ ವಿಭೂತಿಯಿಂದ ಅಲಂಕರಿಸಿ ಕೊಳ್ಳುತ್ತಾರೆ.  ಎಲ್ಲೆಲ್ಲಿ ಶಿವಲಿಂಗಗಳೂ ಅಥವಾ ವಿಗ್ರಹ ಗಳಿವೆಯೋ ಅವುಗಳಲ್ಲೆಲ್ಲಾ ವಿಭೂತಿಯಿಂದ ಶಿವನನ್ನು ಅಲಂಕರಿಸುತ್ತಾರೆ ಮತ್ತು ಅಭಿಷೇಕ ಮಾಡುತ್ತಾರೆ. ಅದನ್ನು ನೋಡಲು ಎರಡು ಕಣ್ಣುಗಳು ಸಾಲವು ಎಂದು ಜಂಭದಿಂದ ಹೇಳಿಕೊಂಡಿತು. ಬಿಲ್ವಪತ್ರೆಯನ್ನು ಪ್ರಸಾದರೂಪದಲ್ಲಿ ಕೊಡುತ್ತಾರೆ. ಅದು ಎರಡು ಮೂರು ದಿನಗಳ ನಂತರ ಒಣಗಿ ಹೋಗುತ್ತದೆ. ಅದನ್ನು ಆಚೆಗೆ ಹಾಕುತ್ತಾರೆ.

ನನ್ನ ಸ್ಥಿತಿ ಹಾಗಿಲ್ಲ, ನಾನು ಶಾಶ್ವತವಾಗಿ ಎಲ್ಲರ ಹಣೆಯಲ್ಲಿಯೂ ಇರುತ್ತೇನೆ. ಹಬ್ಬ ಹರಿದಿನಗಳಲ್ಲಿ ಶಿವನ ಭಕ್ತರು, ಅವರ ಹಣೆ, ಕೈಗಳಿಗೆ ನನ್ನನ್ನು ಪೂಸಿಕೊಂಡು ಸಂತೋಷಪಡುತ್ತಾರೆ. ಹಾಗೂ ಪವಿತ್ರರಾದೆವೆಂಬ ಭಾವದಿಂದ ಧನ್ಯತೆಯನ್ನು ಪಡೆಯುತ್ತಾರೆ. ಪ್ರಸಾದರೂಪದಲ್ಲಿ ನೀಡಿದ ವಿಭೂತಿಯನ್ನು ಡಬ್ಬಗಳಲ್ಲಿ ಹಾಕಿಟ್ಟರೆ, ಅಥವಾ ಪೊಟ್ಟಣಗಳಲ್ಲಿ ಕಟ್ಟಿಹಾಕಿದರೆ, ಹತ್ತಾರು ವರ್ಷಗಳು ಅದು ಕೆಡುವುದಿಲ್ಲ ಎಂದಿತಂತೆ ಆಗ ಬಿಲ್ವಪತ್ರೆಗೆ ದುಃಖವುಂಟಾಯಿತು. ನಾವಿಬ್ಬರೂ ಶಿವನ ಭಕ್ತರು, ನಮ್ಮಲ್ಲಿ ಜಗಳವೇಕೆ? ನಾನು ಕೆಲವು ದಿನಗಳು ಮಾತ್ರ ಬದುಕಿರುತ್ತೇನೆ. ನೀನು ಮಾತ್ರ ಶಾಶ್ವತವಾದವನು. ಬಿಲ್ವಪತ್ರೆ ಹೇಳಿತು 'ನಾನು ಶಿವನನ್ನು ಕುರಿತು ತಪಸ್ಸು ಮಾಡಿ ಬದುಕಿರುವಷ್ಟು ದಿನ ನಿನ್ನ ಸೇವೆಯನ್ನು ಮಾಡುತ್ತೇನೆ. ನಂತರ ಹಿಮಾಲಯದಲ್ಲಿ ನಿನ್ನ ಪರಿವಾರದೊಂದಿಗೆ ಸೇರಿಸಿಕೊಂಡು ನನಗೆ ಕೈಲಾಸದಲ್ಲಿ ಶಾಶ್ವತ ಸ್ಥಾನವನ್ನು ದಯಮಾಡಿ ನೀಡು ಎಂದು ಪ್ರಾರ್ಥಿಸಿಕೊಂಡಿತಂತೆ. ಶಿವ ತಥಾಸ್ತು ಎಂದು ಹೇಳಿ ಅದೃಶ್ಯನಾದನಂತೆ.  ಆದುದರಿಂದ ದೇವಾಲಯಗಳ ಆವರಣಗಳಲ್ಲಿ ಬಿಲ್ವಪತ್ರೆಯ ಮರವನ್ನು ನೆಡುತ್ತಾರೆ. ಅದರಲ್ಲಿ ಶಿವನೇ ವಾಸಿಸುವನೆಂಬ ನಂಬಿಕೆಯಿಂದ, ಆ ಮರವನ್ನು ಯಾರೂ ಹತ್ತುವುದಿಲ್ಲ. ಮತ್ತು ಮರವನ್ನು ಕಡಿಯುವುದೂ ಇಲ್ಲ. ಇದರಿಂದ ಪರಿಸರ ಸಂರಕ್ಷಣೆಯೂ ಆಗುತ್ತದೆ. ಮರವನ್ನು ಬೆಳೆಸುವುದರಿಂದ ಪುಣ್ಯವೂ ಸಿಗುತ್ತದೆ.

ಈ ರೀತಿ ಸಾವಿರಾರು ವರ್ಷಗಳಿಂದ ಬಿಲ್ವಪತ್ರೆಯ ಮರ ಅಭಿವೃದ್ಧಿಯಾಗುತ್ತ ಬಂದಿದ್ದು, ಶಿವನೇ ಈ ರೂಪದಲ್ಲಿ ನಮ್ಮನ್ನು ಕಾಪಾಡುತ್ತಿದ್ದಾನೆ. ಹತ್ತಾರು ಹೆಸರುಗಳುಳ್ಳ ಆ ಪರಮಾತ್ಮ ಶಿವನಿಗೆ ನಮಸ್ಕರಿಸಿ ಅವನಿಂದ ಆಶೀರ್ವಾದವನ್ನು ಪಡೆಯಬೇಕಾದ್ದು ನಮ್ಮ ಕೆಲಸ ಅದು ನಮ್ಮ ಕರ್ತವ್ಯವೂ ಹೌದು.

***ಓಂ ಶಿವಾಯ ನಮಃ ಓಂ ಶಂಕರಾಯ ನಮಃ***

*ಕೃಪೆ : ಶ್ರೀ ಶಂಕರ ಕೃಪಾ*

# ಕೆಡೆಂಜಿ ದಾಮೋದರ ಭಾಗೀರಥಿ ಶಾಸ್ತ್ರಿ ಪ್ರತಿಷ್ಠಾನದ ವತಿಯಿಂದ ಸನ್ಮಾನ




ದಿನಾಂಕ 17–10–2021ನೇ ರವಿವಾರ ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು ಇಲ್ಲಿ ನಡೆದ ನಾಡಹಬ್ಬದಂದು 2020–2021ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರೌಢಶಾಲಾ ಹಾಗೂ ಪದವಿ ಪೂರ್ವ ಶಿಕ್ಷಣದ ಅಂತಿಮ ಪರೀಕ್ಷೆಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿ / ವಿದ್ಯಾರ್ಥಿನಿಯರನ್ನು ಹಾಗೂ ಪಠ್ಯೇತರ ವಿಷಯಗಳಲ್ಲಿ ಪರಿಣತರಾದವರನ್ನು ಮತ್ತು ರೇಖಾಚಿತ್ರ ಕಲೆಯಲ್ಲಿ ಪರಿಣತರಾದ ಶ್ರೀ ಎಚ್. ರಘುವೀರ ಪೆರ್ಡೂರು ಇವರನ್ನು ಕೆಡೆಂಜಿ ದಾಮೋದರ ಭಾಗೀರಥಿ ಶಾಸ್ತ್ರಿ ಪ್ರತಿಷ್ಠಾನದ ವತಿಯಿಂದ ಶ್ರೀಮತಿ ಕೆ. ಸೌಭದ್ರಾ ಸದಾಶಿವ ಶಾಸ್ತ್ರಿ ದಂಪತಿಗಳು ಅಭಿನಂದಿಸಿದರು.

# ಯುಗಾವತಾರಿ ಶ್ರೀ ಪರಶುರಾಮ

ಪೌರಾಣಿಕ ಪರಿಕಲ್ಪನೆಯಲ್ಲಿ ಬೆಳೆದು ಬಂದ ಭಾರತೀಯರಿಗೆ ಶ್ರೀ ಮಹಾವಿಷ್ಣುವಿನ ದಶಾವತಾರ ಕಾಲ್ಪನಿಕ ಚೇತೋಹಾರಿ ಕಥೆಗಳಲ್ಲ, ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ರಕ್ಷಿಸುವ ಭಗವಂತನ ಸಂಕಲ್ಪದ ರೂಪಗಳು. ಧರ್ಮ ಮತ್ತು ಸತ್ಯಕ್ಕೆ ಅಂತಿಮ ಜಯ ಎಂಬುದೇ ಸಂದೇಶ.

ಮಹರ್ಷಿ ಋಚೀಕ – ಸತ್ಯವತಿಯರ ಮಗನಾದ ಮಹರ್ಷಿ ಜಮದಗ್ನಿ ಮಂತ್ರದೃಷ್ಟಾರಾಗಿದ್ದರು. ಋಗ್ವೇದದ ಅನೇಕ ಸೂತ್ರಗಳು ಮಹರ್ಷಿ ಜಮದಗ್ನಿಗಳು ಪ್ರಪ್ರಥಮವಾಗಿ ಕುಂಡದಲ್ಲಿ ಅಗ್ನಿಯನ್ನು ಪ್ರತಿಷ್ಠಾಪಿಸಿದ ಬಗ್ಗೆ ಹೇಳುತ್ತವೆ. ಅಥರ್ವಣ ವೇದದಲ್ಲಿನ ಕೆಲವು ಸೂಕ್ತಗಳಂತೆ ಇರುವ ಕೃಷಿಗೆ ಸಂಬಂಧಿಸಿದಂತೆ "ಕೃಷಿಶಾಸ್ತ್ರ"ವನ್ನೂ, ಮರಗಿಡ, ಬಳ್ಳಿ ಹಾಗೂ ಪೈರುಗಳಿಗೆ ತಗಲುವರೋಗಗಳು ಅವುಗಳ ನಿವಾರಣೆ ಬಗ್ಗೆ ಕೃಷಿಶಾಸ್ತ್ರವನ್ನು ರಚಿಸಿದಂತೆ ತಿಳಿದುಬರುತ್ತದೆ. ಕೃತಯುಗವು ಧರ್ಮ ಯುಗವಾದರೂ ಕೆಲವೊಮ್ಮೆ ರಾಜ ಸೂತ್ರವನ್ನು ಹಿಡಿದ ಅರಸರು ಅಧಿಕಾರದ ಅಮಲಿನಿಂದ ಲೋಕಕಂಟಕರಾಗಿ, ಭ್ರಷ್ಟರಾಗಿ, ನಿರುಪದ್ರವಿಗಳನ್ನು ಕಾಡುವುದು ನಡೆದೇ ಇತ್ತು. ಇಂತಹ ಸಂದಿಗ್ಧ ಕಾಲದಲ್ಲಿ ಶ್ರೀ ಮಹಾವಿಷ್ಣು ಆರನೆಯ ಅವತಾರವಾಗಿ ಮಹರ್ಷಿ ಜಮದಗ್ನಿ, ರೇಣುಕೆಯ ಮಗನಾಗಿ ಜನಿಸಲು ನಿರ್ಧರಿಸಿದ.

ಸತಿ ರೇಣುಕೆಗೆ ನವ ಮಾಸಗಳು ತುಂಬಿ ಬರಲು ವೈಶಾಖ ಶುದ್ಧ ತದಿಗೆಯ ದಿನದಲ್ಲಿ ಪುತ್ರ ರತ್ನ ಜನನವಾಯಿತು. ಮಗನಿಗೆ 'ರಾಮ'ನೆಂದು ನಾಮಕರಣ ಮಾಡಿದರು. ಭಾರ್ಗವ ವಂಶದ ಸಂಜಾತನಾದ ರಾಮನು ಭಾರ್ಗವ ರಾಮನೆಂದೇ ಪ್ರಖ್ಯಾತನಾದನು. ಮುಂದೆ ಭಾರ್ಗವ ರಾಮನು ತನ್ನ ಅಪ್ರತಿಮ ತಪಸ್ಸಿನಿಂದ ಬ್ರಹ್ಮ ತೇಜನನ್ನು ತಮ್ಮದಾಗಿಸಿಕೊಂಡು ಭಗವಾನ್ ಶ್ರೀ ಶಂಕರರಿಂದ ಧನುವಿದ್ಯೆ ಮತ್ತು ದಿವ್ಯ ಧನುಸ್ಸನ್ನು ಪಡೆದುಕೊಂಡರು. ಗಣಾಧಿಪತಿಯಿಂದ ಅಮೋಘವಾದ ಅಸ್ತ್ರಗಳನ್ನು ಮತ್ತು ದಿವ್ಯ ಪರಶುವನ್ನು ಪಡೆದು ಪರಶುರಾಮರಾದರು. ಶ್ರೀ ಗುರು ದತ್ತಾತ್ರೇಯರಿಂದ ಹಾಗೂ ತಮ್ಮ ತಂದೆ ಮಹರ್ಷಿ ಜಮದಗ್ನಿಯಿಂದ ಸಕಲ ಶಾಸ್ತ್ರ, ಅಸ್ತ್ರ ಶಸ್ತ್ರ ವಿದ್ಯೆಯನ್ನು ಕಲಿತು ದಿವ್ಯಚೇತನ ಸ್ವರೂಪರಾದರು.

ಅನ್ಯಾಯ, ಅನಾಚಾರ, ಶೋಷಣೆ, ದಬ್ಬಾಳಿಕೆ ಕಂಡರೆ ಸಿಡಿದೇಳುತ್ತಿದ್ದರು. ತಮ್ಮ ಆಶ್ರಮದ ಸುರಧೇನುವನ್ನು ಕದ್ದು ಕೊಂಡೊಯ್ದ ಕಾರ್ತವೀರ್ಯಾರ್ಜುನನನ್ನು ಏಕಾಂಗಿಯಾಗಿ ಎದುರಿಸಿ ಸುರಧೇನುವನ್ನು ಮರಳಿ ಆಶ್ರಮಕ್ಕೆ ಕರೆತಂದರು. ಕೆಲವು ದಿನಗಳ ನಂತರ ತಪಸ್ಸಿಗಾಗಿ ಹಿಮಾಲಯಕ್ಕೆ ತೆರಳಿದರು. ತಪೋಸಂಪನ್ನರಾಗಿ ಹಿಂದಿರುಗುವ ವೇಳೆಗೆ ಆಶ್ರಮದಲ್ಲಿ ಕೋಲಾಹಲ ಉಂಟಾಗಿತ್ತು. ಮಾನಸಿಕ ಅಪಚಾರಗೈದ ತಮ್ಮ ಪತ್ನಿ ರೇಣುಕೆಯ ತಲೆಯನ್ನು ಕತ್ತರಿಸಲು ಒಪ್ಪದ ನಾಲ್ವರು ಪುತ್ರರನ್ನು ಜಮದಗ್ನಿ ಮಹರ್ಷಿಗಳು ಕ್ರೋಧಾಗ್ನಿಯಿಂದ ಭಸ್ಮಗೊಳಿಸಿದರು. ಆದರೆ ಪರಶುರಾಮರು ತಂದೆಯ ಆಣತಿಯಂತೆ ಮಾತೃ ರೇಣುಕೆಯ ತಲೆಯನ್ನು ಪರಶುವಿನಿಂದ ಕಡಿದೊಗೆದರು. ಹಿಂದೂ ಮುಂದೂ ನೋಡದೆ ತಮ್ಮ ಕಠೋರ ಆಣತಿಯನ್ನು ಅಳುಕದೆ ನೆರವೇರಿಸಿದ ಪರಶುರಾಮರಿಗೆ ಆಶೀರ್ವದಿಸಿ "ಚಿರಂಜೀವಿ" ಪಟ್ಟವನ್ನು ನೀಡಿದರು. ಅನಂತರ ಪರಶುರಾಮರು ತಂದೆಯ ಅಪ್ಪಣೆ ಪಡೆದು ಮಾತೃಹತ್ಯಾ ದೋಷದ ಪರಿಹಾರಾರ್ಥವಾಗಿ ತೀರ್ಥಯಾತ್ರೆಯನ್ನು ಕೈಗೊಂಡರು. ದುರಾಡಳಿತವನ್ನು ನಡೆಸುತ್ತಿದ್ದ ಕಾರ್ತ್ಯವೀರ್ಯಾರ್ಜುನನು ಪರಶುರಾಮರು ತೀರ್ಥಯಾತ್ರೆಗೆ ತೆರಳಿರುವ ಸಮಯವನ್ನು ಸಾಧಿಸಿ ಜಮದಗ್ನಿಗಳ ಆಶ್ರಮಕ್ಕೆ ನುಗ್ಗಿ ಕಗ್ಗೊಲೆ ನಡೆಸಿದನು. ಈ ಮಾರಣ ಹತ್ಯಾಕಾಂಡದಲ್ಲಿ ಮಹರ್ಷಿ ಜಮದಗ್ನಿ ಹಾಗೂ ಆತನ ನಾಲ್ವರು ಪುತ್ರರು ಆಶ್ರಮ ವಾಸಿಗಳ ಸಹಿತ ಹತರಾದರು. ಸತಿ ರೇಣುಕ ಮೂರ್ಛಿತಳಾದಳು. ಅಪಸ್ವರ ಕರ್ಕಶನಾದ ಪರಶುರಾಮರನ್ನು ಕಂಗೆಡಿಸಿತು. ಗಂಡು ಕೊಡಲಿಯನ್ನು ಹೆಗಲಿಗೇರಿಸಿದರು. ರಾಜ ಕಾರ್ತವೀರ್ಯಾರ್ಜುನನ ಅಧಿಕಾರ ಅಮಲಿನಿಂದ ನಡೆದ ಬರ್ಬರ ಹತ್ಯಾಕಾಂಡಕ್ಕೇ ಪ್ರತೀಕಾರ ತೀರಿಸಿಕೊಳ್ಳುವುದಾಗಿ ಪ್ರತಿಜ್ಞೆ ಮಾಡಿ ಏಕಾಂಗಿಯಾಗಿ ಹೋರಾಡಿ ಕಾರ್ತವೀರ್ಯಾರ್ಜುನನನ್ನು ಸದೆ ಬಡಿದರು. ನಂತರ ಇಪ್ಪತ್ತೊಂದು ಬಾರಿ ಭೂ ಖಂಡವನ್ನು ಸುತ್ತಿ ಅಧರ್ಮಿ ರಾಜರುಗಳನ್ನು ಸದೆಬಡಿದು ಶಾಂತಿ ಮತ್ತು ಸ್ಥಿರತೆಯನ್ನು ನೆಲೆಗೊಳಿಸಿದರು. ತಾವು ತಮ್ಮ ಬಾಹು ಬಲದಿಂದ ಪಡೆದ ಭೂಮಿಯನ್ನು ಕಶ್ಯಪ ಮಹರ್ಷಿಗಳಿಗೆ ದಾನಗೈದು ತಮ್ಮನ್ನು ಹುಡುಕಿಕೊಂಡು ಬಂದ ಕಿರೀಟವನ್ನು ತ್ಯಾಗ ಮಾಡಿದರು. ತಾವು ವರಣನ ಮಗ ಪುಷ್ಕರನಿಂದ ತಿಳಿದ 'ರಾಜನೀತಿಯನ್ನು' ರಾಜರುಗಳಿಗೆ ಬೋಧಿಸಿದರು. ಕಿರೀಟ ತ್ಯಾಗ ಮಾಡಿದ ಪರಶುರಾಮರನ್ನು ಜನತೆ 'ರಾಜರಾಜೇಶ್ವರ ಪರಶುರಾಮ' ಎಂದು ಅಭಿಮಾನದಿಂದ ಕರೆಯತೊಡಗಿದರು. ನಂತರ ದ್ವಾಪರ ಯುಗದಲ್ಲಿ ಅಧರ್ಮಿಯ ಜರಾಸಂಧನ ಉಪಟಳವು ಹೆಚ್ಚಾಗುತ್ತಲೇ ಇದ್ದು ಎಲ್ಲೆಡೆ ಅಶಾಂತಿ ಉಂಟಾಗಿ ಜರಾಸಂಧನನ್ನು ಲೋಕಕಲ್ಯಾಣಕ್ಕಾಗಿ ಸಂಹಾರ ಮಾಡುವಂತೆ ಪರಶುರಾಮರು ಶ್ರೀ ಕೃಷ್ಣ ಹಾಗೂ ಶ್ರೀ ಬಲರಾಮರನ್ನು ಕೋರಿ ತಮ್ಮಲ್ಲಿದ್ದ ಸುದರ್ಶನಚಕ್ರವನ್ನು ಶ್ರೀ ಕೃಷ್ಣನಿಗೆ ನೀಡಿ ಹಾಗೂ ಯುದ್ಧದ ಕುರಿತಾದ ಮಾತುಕತೆ ನಡೆಸಿ ಆಶೀರ್ವದಿಸುತ್ತಾರೆ. ಪಿತಾಮಹ ಭೀಷ್ಮಾಚಾರ್ಯ, ಧನುರ್‌ವಿದ್ಯಾ ಪಾರಂಗತ ದ್ರೋಣಾಚಾರ್ಯ ಮತ್ತು ಮಹಾರಥಿ ಕರ್ಣರಿಗೆ ಯುದ್ಧ ವಿದ್ಯೆಯನ್ನು ಬೋಧಿಸಿ ಸಮಸ್ತ ಅಸ್ತ್ರ ಶಸ್ತ್ರ ವಿದ್ಯಾಭೂಷಿತರನ್ನಾಗಿ ಮಾಡಿದ ಬಗ್ಗೆ ಉಲ್ಲೇಖವಿದೆ.

ತಮ್ಮ ಶಾಪ ಕೊಡುವ ಶಕ್ತಿಯನ್ನು ಹಾಗೂ ವರನೀಡುವ ಶಕ್ತಿಯನ್ನು ಸಮಾಜದ ಸಮರಸ ಜೀವನಕ್ಕೆ ವಿನಿಯೋಗಿಸಿದರು. ಸ್ವತಃ ವಾಸಕ್ಕಾಗಿ ತಮ್ಮಲ್ಲಿದ್ದ ಶಸ್ತ್ರವಿದ್ಯಾ ಸಾಮರ್ಥ್ಯದಿಂದ, ಭೌಗೋಳಿಕ ಕ್ರಾಂತಿಯ ಮೂಲಕ ಸಮುದ್ರವನ್ನು ಹಿಂದೆ ಸರಿಸಿ ಈ ಅಪರಾಂತವೆಂಬ ಪರಶುರಾಮ ಕ್ಷೇತ್ರವನ್ನು ನಿರ್ಮಿಸಿದರು. ತಾವು ಪಡೆದ ಶ್ರೀ ವಿದ್ಯಾ ರಹಸ್ಯಗಳನ್ನು ತಿಳಿಸುವ 'ಪರಶುರಾಮ ತಂತ್ರ'ವೆಂಬ ಗ್ರಂಥ ಹಾಗೂ 'ಜಮದಗ್ನ' ಗ್ರಂಥವನ್ನು ರಚಿಸಿದರು. ಚಿರಂಜೀವಿಗಳಾದ ಶ್ರೀ ಪರಶುರಾಮರು ಕೈಲಾಸಪರ್ವತದಲ್ಲಿ ತಪೋನಿರತರಾಗಿದ್ದಾರೆ ಎಂಬುದೇ ಇಂದಿಗೂ ಎಲ್ಲರ ನಂಬಿಕೆ.

ಶ್ರೀ ಪರಶುರಾಮರು ತೀರ್ಥಯಾತ್ರೆ ಮಾಡಿದ ದಕ್ಷಿಣ ಜಿಲ್ಲೆಯ ಪ್ರಮುಖ ಸ್ಥಳಗಳಾದ ಕುಂಜಾರು, ಮಾಳ– ಎಡವಾಡಿ, ಮಾಳ–ಗುಳಿಮನೆ, ದರ್ಭೆತಡ್ಕ, ಕೆರೆ, ಸನ್ಯಾಸಿಕಟ್ಟೆ ಗ್ರಾಮಗಳಲ್ಲಿ ದೇವಸ್ಥಾನಗಳನ್ನು ಕಾಲಾನುಕ್ರಮ ನಿರ್ಮಿಸಲಾಗಿದ್ದು ಪೂಜಾ ಪುರಸ್ಕಾರಗಳು ನಡೆಯುತ್ತಿವೆ. ಹಾಗೂ ಮಾತೃಹತ್ಯಾ ದೋಷ ಪರಿಹಾರಕ್ಕಾಗಿ ಕೈಗೊಂಡ ತೀರ್ಥಯಾತ್ರೆಯಲ್ಲಿ ದಕ್ಷಿಣ ಕಾಶಿ ಎಂದೇ ಪ್ರಖ್ಯಾತವಾದ ನಂಜನಗೂಡು ಕ್ಷೇತ್ರಕ್ಕೂ ಆಗಮಿಸಿ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ಪ್ರತ್ಯಕ್ಷ ದರ್ಶನ ಪಡೆದು ಸ್ವಾಮಿಯ ಅನುಗ್ರಹದಂತೆ ಕೆಲವು ಕಾಲ ಕಪಿಲಾ ನದಿಯ ದಡದಲ್ಲಿ ತಪಸ್ಸು ಮಾಡಿದರೆಂದು ಪ್ರತೀತಿ ಇದೆ. ಇಂದಿಗೂ ನದಿಯ ದಡದಲ್ಲಿ ತಪಸ್ಸು ಮಾಡಿದ ಸ್ಥಳದಲ್ಲಿನ ಶ್ರೀ ಪರಶುರಾಮರ ದೇವಸ್ಥಾನದಲ್ಲಿ ಪೂಜಾ ಕೈಂಕರ್ಯಗಳನ್ನು ನಡೆಸಲಾಗುತ್ತದೆ.

***ಕೃಪೆ : "ಶ್ರೀ ಶಂಕರ ಕೃಪಾ"***

## ಜ್ಞಾನ - ನುಡಿ

ರಾಜಕಾರಣದಲ್ಲಿ ವೈರಿ ಈ ಹೊತ್ತು. ನಾಳೆ ಏನಾಗುವನು? ಉಂಟೇನು ಗೊತ್ತು? ಕೈಲಿ ಸಿಕ್ಕಿದರೆ ಸಾಕಷ್ಟು ನೈವೇದ್ಯ ಕಡುವೈರಿಯೂ ಗೆಳೆಯನಾಗುವುದು ಸಾಧ್ಯ.

***– ದಿನಕರ ದೇಸಾಯಿ***

## ಜ್ಞಾನ - ಗಾದೆ

- ಧೈರ್ಯ ಕಳೆಯೊಂಡ ಸಾದಿ ನಡೆಪೆರ ಸಾಧ್ಯ ಇದ್ದಿ
- ನಮ್ಮವೇ ನಂಕ್ ಇದ್ದಿ ನನೊರಿಯನ್ ಸಿಕ್ಕುವಾ?
- ನರಮಾನಿನ ಕಾರ್ ಪಂಡತ್ ಪತ್ತಿನ ಕತ್ತೆದ ಕಾರ್ ಆತ್ ಪೋನು

## ಜ್ಞಾನ - ನಗೆ

***ಗರ್ಲ್ ಫ್ರೆಂಡ್*** : ಈ ಬಾರಿ ನಾನು ಫೇಲ್ ಆದರೆ ನನ್ನ ಮದುವೆಯನ್ನು ಒಬ್ಬ ಅಟೋ ರಿಕ್ಷಾ ಓಡಿಸುವವನೊಂದಿಗೆ ಮಾಡಿಬಿಡುವುದಾಗಿ ನನ್ನ ತಂದೆ ಹೇಳಿದ್ದಾರೆ.

***ಬಾಯ್ ಫ್ರೆಂಡ್*** : ಒಳ್ಳೆಯದೇ ಆಯಿತು ಏಕೆಂದರೆ ನಾನು ಫೇಲ್ ಆದರೆ ನನಗೊಂದು ಅಟೋ ರಿಕ್ಷಾ ಕೊಡಿಸುವುದಾಗಿ ನನ್ನ ಡ್ಯಾಡಿ ಹೇಳಿದ್ದಾರೆ!


## ಜ್ಞಾನ - ವಿಸ್ಮಯ


ಗೋಸುಂಬೆಗಳು ವಿವಿಧ ನಮೂನೆಯ ಗಾತ್ರಗಳಲ್ಲಿರುತ್ತವೆ. ಎರಡು ಸೆಂಟಿಮೀಟರ್‌ನಷ್ಟು ಚಿಕ್ಕ ಗಾತ್ರದಿಂದ ಹಿಡಿದು 60 ಸೆಂಟಿಮೀಟರ್ ವರೆಗಿನ ದೊಡ್ಡ ಗಾತ್ರದ ಗೋಸುಂಬೆಗಳನ್ನು ಕಾಣಬಹುದು. ಗೋಸುಂಬೆಗಳ ನಾಲಿಗೆ ಅವುಗಳ ದೇಹದ ಅರ್ಧದಷ್ಟು ಉದ್ದವಾಗಿರುತ್ತದೆ! ಇದರ ನಾಲಿಗೆಯಲ್ಲಿ ವಿಶೇಷ ಅಂಟಿನ ದ್ರವ ಇರುತ್ತದೆ. ನಾಲಿಗೆಯನ್ನು ಹೊರಹಾಕಿ ಕ್ಷಣಾರ್ಧದಲ್ಲಿ ಹುಳಹುಪ್ಪಟೆಗಳನ್ನು ತಿಂದು ಮುಗಿಸುತ್ತವೆ.

PRAVEEN KUMAR ADYAPADY
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
*Authorised Dealers for :*
Vijai Super GP 150 &
Vikram 3 Wheelers (Petrol & Diesel)


# ಶ್ರೀ ಸಭಾದ ನಾಡಹಬ್ಬದಂದು ನಡೆದ 'ಮನ್ಮಥ ವಿವಾಹ' ಕಲಾವಿದರು





ಶ್ರೀ ಸಂಜಯ ಕುಮಾರ್ ರಾವ್



ಶ್ರೀಮತಿ ಶೈಲಜಾ ಶ್ರೀಕಾಂತ್



ಶ್ರೀ ಶ್ರೀಕಾಂತ್ ರಾವ್



ಶ್ರೀ ಪ್ರಜ್ವಲ್ ಕೊಲ್ಲಂಗಾನ



ಕುಮಾರಿ ನಂದಿತಾ ಎಸ್. ರಾವ್




ಶ್ರೀ ವಲ್ಲೀಶ ರಾವ್



ಶ್ರೀ ನಾಗರಾಜ ಶರ್ಮ



ಶ್ರೀ ನಾಗರಾಜ ವಿಟ್ಲ



ಶ್ರೀ ಪ್ರತೀಕ್ ಎಲ್ಲಂಗಳ



ಶ್ರೀ ಉದಯ ಕುಮಾರ್ ಅಡೂರು



ಶ್ರೀ ಅನಿಲ್ ರಾವ್ ನೆಲ್ಲಿಕುಂಜೆ



ಶ್ರೀಮತಿ ಅರುಣಾ ಸೋಮಶೇಖರ್



ಶ್ರೀ ಶ್ರೀಕಾಂತ್ ರಾವ್



ಶ್ರೀ ಶ್ರೀಹರಿ ಆದ್ಯಪಾಡಿ



ಶ್ರೀ ಅನ್ವೇಷ್ ಕೆ. ರಾವ್

ಭಾಗವತರು : ಶ್ರೀ ಸುಬ್ರಹ್ಮಣ್ಯ ಭಟ್ ಒಡ್ಡೂರು ಮತ್ತು ಶ್ರೀ ಅಶ್ವಥ್ ನಾರಾಯಣ ಭಟ್
ಮದ್ದಳೆ : ಶ್ರೀ ಪೆರ್ಲ ಗಣಪತಿ ಭಟ್ ಚೆಂಡೆ : ಶ್ರೀ ನಂದಳಿಕೆ ಕೃಷ್ಣರಾಜ ಭಟ್
ಚಕ್ರತಾಳ : ಶ್ರೀ ರಂಜಿತ್ ಕೈಕಂಬ


ಛಾಯಾಚಿತ್ರ
ಶ್ರೀ ರಘುವೀರ್ ಉಜಿರೆ

Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher :* *Sri Harsha Kumar Kedige, President, Shree Subrahmanya Sabha (R.), Kodialbail, Mangalore - 3*
*Editor :* *Sri M. S. Raghunath Rao, Darbe, Puttur* *Printed at :* *Rajesh Power Press, Darbe - 574 202, Puttur, D. K.*